# 55 ನೇ th

# ಘಟಿಕೋತ್ಸವ

# Convocation

21-09-2021

## ಸ್ವಾಗತ ಭಾಷಣ ಹಾಗೂ ಸಂಕ್ಷಿಪ್ತ ವರದಿ

ಡಾ. ಎಸ್. ರಾಜೇಂದ್ರ ಪ್ರಸಾದ್

ಕುಲಪತಿಗಳು

## Welcome Speech and Brief Report

Dr. S. Rajendra Prasad

Vice-Chancellor

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

UNIVERSITY OF AGRICULTURAL SCIENCES, BANGALORE



Hon’ble Minister for Agriculture, GoK & Pro-Chancellor and Vice-Chancellor awarding Gold Medal during 54th Convocation of UAS-B

ಮಾನ್ಯ ಕೃಷಿ ಸಚಿವರು ಮತ್ತು ವಿಶ್ವವಿದ್ಯಾನಿಲಯದ ಸಹ ಕುಲಾಧಿಪತಿಗಳು ಹಾಗೂ ಕುಲಪತಿಗಳು 54ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕವನ್ನು ನೀಡುತ್ತಿರುವುದು




Hon'ble Ministers for Agriculture and Horticulture, Govt. of Karnataka and other dignitaries along with the Awardee farmers and Extension worker during Krishimela-2020

ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರುಗಳು ಹಾಗೂ ಇತರ ಗಣ್ಯರು ಕೃಷಿಮೇಳ–2020ರ ಪ್ರಶಸ್ತಿ ವಿಜೇತ ಪ್ರಗತಿಪರ ರೈತರು ಮತ್ತು ವಿಸ್ತರಣಾ ಕಾರ್ಯಕರ್ತರೊಂದಿಗೆ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**UNIVERSITY OF AGRICULTURAL SCIENCES, BANGALORE**

# ಐವತ್ತೈದನೇ ಘಟಿಕೋತ್ಸವ
# ಸ್ವಾಗತ ಭಾಷಣ ಹಾಗೂ ಸಂಕ್ಷಿಪ್ತ ವರದಿ
# Fifty Fifth Convocation
# Welcome Speech and Brief Report

**21-09-2021**

## ಐವತ್ತೈದನೇ ಘಟಿಕೋತ್ಸವ
## ಸ್ವಾಗತ ಭಾಷಣ ಹಾಗೂ ಸಂಕ್ಷಿಪ್ತ ವರದಿ

**ಸನ್ಮಾನ್ಯ ಕುಲಾಧಿಪತಿಗಳೇ, ಸಹಕುಲಾಧಿಪತಿಗಳೇ, ಪ್ರತಿಷ್ಠಿತ ಮುಖ್ಯ ಅತಿಥಿಗಳೇ, ಆಡಳಿತ ನಿರ್ವಹಣಾ ಮಂಡಳಿ ಸದಸ್ಯರೇ, ಶೈಕ್ಷಣಿಕ ಪರಿಷತ್ತಿನ ಸದಸ್ಯರೇ, ಹಾಲಿ ಹಾಗೂ ವಿಶ್ರಾಂತ ಕುಲಪತಿಗಳೇ, ಪದಕಗಳ ದಾನಿಗಳೇ, ಪ್ರತಿಷ್ಠಿತ ಆಹ್ವಾನಿತರೇ, ಅಧಿಕಾರಿಗಳೇ ಹಾಗೂ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳೇ, ಈ ವರ್ಷ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳೇ, ಮಾಧ್ಯಮದ ಪ್ರತಿನಿಧಿಗಳೇ, ಮಹಿಳೆಯರೇ ಮತ್ತು ಮಹನೀಯರೇ.**

**ಆಡಳಿತ ನಿರ್ವಹಣಾ ಮಂಡಳಿಯ, ಶೈಕ್ಷಣಿಕ ಪರಿಷತ್ತಿನ ಸದಸ್ಯರ ಪರವಾಗಿ ಹಾಗೂ ವೈಯಕ್ತಿಕವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 55ನೇ ಘಟಿಕೋತ್ಸವ ಸಮಾರಂಭಕ್ಕೆ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಲು ನನಗೆ ಹೆಮ್ಮೆಯೆನಿಸುತ್ತಿದೆ.**

ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು, ಇಂದಿನ ಘಟಿಕೋತ್ಸವ ಸಮಾರಂಭದ ಅಧ್ಯಕ್ಷರಾಗಿ ಪದವಿಗಳನ್ನು ಪ್ರದಾನ ಮಾಡಲು ಒಪ್ಪಿ, ಈ ದಿನ ಇಲ್ಲಿಗೆ ಆಗಮಿಸಿ, ನಮ್ಮೊಂದಿಗಿರುವುದು ನಮಗೆಲ್ಲರ ಹೆಮ್ಮೆಯ ವಿಷಯವಾಗಿದೆ.

ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರು 18ನೇ ಮೇ, 1948 ರಂದು ಜನಿಸಿದರು; ಇವರು ಮಧ್ಯಪ್ರದೇಶದ ಉಜ್ಜೈನಿಯ ವಿಕ್ರಮ್ ವಿಶ್ವವಿದ್ಯಾಲಯದಿಂದ ಬ್ಯಾಚುಲರ್ ಆಫ್ ಆರ್ಟ್ಸ್ ಪದವಿಯನ್ನು ಪೂರೈಸಿದರು. ಇವರಿಗೆ ಡಾ. ಬಿ. ಆರ್. ಅಂಬೇಡ್ಕರ್ ಸಾಮಾಜಿಕ ವಿಜ್ಞಾನ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಲಾಗಿದೆ. ಇವರು ಮಧ್ಯಪ್ರದೇಶ ರಾಜ್ಯವನ್ನು ಪ್ರತಿನಿಧಿಸುವ ಭಾರತೀಯ ಸಂಸತ್ತಿನ ಮೇಲ್ಮನೆ ರಾಜ್ಯ ಸಭೆಯ ಸದಸ್ಯರಾಗಿದ್ದರು. ಇವರು ಈ ಹಿಂದೆ 1996 ರಿಂದ 2009 ರವರೆಗೆ ಲೋಕಸಭೆಯ ಭಾರತೀಯ ಸಂಸತ್ತಿನ ಕೆಳಮನೆಯಲ್ಲಿ ಶಾಜಾಪುರವನ್ನು ಪ್ರತಿನಿಧಿಸಿದ್ದರು. ಅವರು 2014 ರಿಂದ 2021 ರವರೆಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ. ಇವರು ಭಾರತೀಯ ಸಂಸತ್ತಿನ ಮೇಲ್ಮನೆಯ ಸಭಾ ನಾಯಕರಾಗಿದ್ದರು. ಮಧ್ಯಪ್ರದೇಶದವರಾದ ಶ್ರೀಯುತರು ಕರ್ನಾಟಕದ ರಾಜ್ಯಪಾಲರಾಗಿ ಸೇವೆ ಸಲ್ಲಿಸುತ್ತಿರುವ ಮೊದಲ ವ್ಯಕ್ತಿ. ಜುಲೈ 11, 2021 ರಂದು ಕರ್ನಾಟಕದ 19ನೇ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ.

**ಸನ್ಮಾನ್ಯರೇ, ತಾವು ಈ ಘಟಿಕೋತ್ಸವಕ್ಕೆ ಆಗಮಿಸಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ತಮ್ಮನ್ನು ವಿಶ್ವವಿದ್ಯಾನಿಲಯದ 55ನೇ ಘಟಿಕೋತ್ಸವ ಸಮಾರಂಭಕ್ಕೆ ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.**

ಕರ್ನಾಟಕ ಸರ್ಕಾರದ ಕೃಷಿ ಸಚಿವರಾಗಿರುವ ಹಾಗೂ ವಿಶ್ವವಿದ್ಯಾನಿಲಯದ ಸಹಕುಲಾಧಿಪತಿಗಳಾಗಿರುವ ಸನ್ಮಾನ್ಯ ಶ್ರೀ ಬಿ. ಸಿ. ಪಾಟೀಲ್‌ರವರು ಘಟಿಕೋತ್ಸವ ಸಮಾರಂಭದಲ್ಲಿ ಉಪಸ್ಥಿತರಿರುವುದು ನಮಗೆಲ್ಲರಿಗೂ ಹರ್ಷವನ್ನು ತಂದಿದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಯಲಿವಾಲ ಗ್ರಾಮದಲ್ಲಿ 1956ರ ನವೆಂಬರ್ 14 ರಂದು ಜನಿಸಿದ ಶ್ರೀಯುತರು ತಮ್ಮ ಶಿಕ್ಷಣವನ್ನು ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪೂರೈಸಿದರು.

ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿ ಸುಮಾರು ಎರಡು ದಶಕಗಳ ಕಾಲ ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯಲ್ಲಿ ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಅತ್ಯುತ್ತಮ ಚಿತ್ರನಟರೂ ಸಹ ಆಗಿರುವ ಶ್ರೀಯುತರು 25ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಇವರ ಅಭಿಮಾನಿಗಳು ಇಂದಿಗೂ ಇವರನ್ನು ಅವರ 'ಕೌರವ' ಸಿನಿಮಾದ ಪಾತ್ರಕ್ಕಾಗಿ ಸ್ಮರಿಸುತ್ತಾರೆ. ಶ್ರೀಯುತರು ಸಕ್ರಿಯ ರಾಜಕಾರಣಿಯಾಗಿದ್ದು, ಹಿರೇಕೆರೂರು ಕ್ಷೇತ್ರವನ್ನು 2004, 2008, 2018 ಮತ್ತು 2019ರಲ್ಲಿ ಪ್ರತಿನಿಧಿಸಿದ್ದಾರೆ. ಶ್ರೀಯುತರು ಆನ್‌ಲೈನ್ ಬೆಳೆ ಸಮೀಕ್ಷೆ ಆಪ್ (ರೈತರ ಬೆಳೆ ಸಮೀಕ್ಷೆ ಆಪ್), ಕೃಷಿ ಯಂತ್ರೋಪಕರಣಗಳ ಸೇವೆಗಳು, ಹವಾಮಾನ ಚತುರ ಕೃಷಿಯ ಉತ್ತೇಜನ, ಸಮಗ್ರ ಕೃಷಿ ಪದ್ಧತಿಯಂತಹ ಹಲವಾರು ನವೀನ ಮತ್ತು ಅಭಿವೃದ್ಧಿ

# Fifty Fifth Convocation
# Welcome Speech and Brief Report

**Hon'ble Chancellor, Hon'ble Pro-Chancellor, Distinguished Chief Guest, Members of Board of Management, Members of Academic Council, the present and former Vice-Chancellors and Officers of Farm Universities, Donors of Medals, Distinguished Invitees, Officers and Faculties of the University, Graduating Students of the Year, Representatives of Media, Ladies and Gentlemen.**

**On behalf of the Board of Management, Academic Council and on my own behalf, I feel immensely privileged to extend a warm welcome to each one of you present here on this occasion of the 55$^{th}$Convocation of the University of Agricultural Sciences, Bangalore.**

It is a matter of pride to have with us Hon'ble **Shri Thaawar Chand Gehlot,** the Governor of Karnataka and Chancellor of the University of Agricultural Sciences, Bangalore, who has kindly consented to preside over the convocation and confer the degrees.

Hon'ble Shri Thaawar Chand Gehlot was born on 18$^{th}$ May 1948. He completed his Bachelor of Arts Degree from Vikram University, Ujjain, Madhya Pradesh. He was awarded Honorary Doctorate by Dr. B.R. Ambedkar University of Social Sciences, Indore, MP. He was a member of the Rajya Sabha, Upper House of Indian Parliament representing the state of Madhya Pradesh. He formerly represented Shajapur in the Indian Parliament from 1996 to 2009. He also served as the Minister of Social Justice and Empowerment from 2014 to 2021. He was also the Leader of the House in the Upper house of Parliament. He is also the first person from Madhya Pradesh serving as the 19$^{th}$ Governor of Karnataka from July 11, 2021.

**Sir, we are honoured by your gracious presence on this great occasion of our Convocation. I heartily extend a very warm welcome to you Sir for the 55$^{th}$Convocation of the University of Agricultural Sciences, Bangalore.**

We are gratified to have with us **Shri B.C. Patil,** Hon'ble Minister for Agriculture, GoK and Pro-Chancellor of the UAS-BUniversity. He born in Yalivala village, SorabaTaluk, Shivamogga district on 14$^{th}$November, 1956. He completed his education in Shivamogga and Davanagere districts.

He has served in higher positions in the Karnataka State Police Department for nearly two decades as honest and strict officer. He is also an excellent film actor and has acted in more than 25 kannada films, which are even today are remembered by his fans for his role in the film 'Kourava'. He is an active politician representing Hirekerur Legislative Constituency four times during 2004, 2008, 2018 and 2019. He is the architect of several innovative cum development programmes in the farming sector like, Online Crop Survey App 'Raitara Bele Sameekshe App' (ರೈತರ ಬೆಳೆ ಸಮೀಕ್ಷೆ ಆ್ಯಪ್), Farm

ಕೇಂದ್ರಿತ ಕಾರ್ಯಕ್ರಮಗಳ ರೂವಾರಿಯಾಗಿದ್ದಾರೆ ಹಾಗೂ ಇವುಗಳ ಮೂಲಕ ಆಹಾರೋತ್ಪಾದನೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ರೈತರ ಅವಶ್ಯಕತೆಗಳನ್ನು ಅರಿತು ಅವುಗಳನ್ನು ಪರಿಹರಿಸಲು ಇತ್ತೀಚೆಗೆ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ಮಾನ್ಯ ಕೃಷಿ ಮಂತ್ರಿಗಳು ಸ್ನಾತಕ ಕೃಷಿ ಪದವಿಯ ಪ್ರವೇಶಕ್ಕೆ ಕೃಷಿಕರ ಮೀಸಲಾತಿಯನ್ನು ಶೇ. 40 ರಿಂದ 50 ಕ್ಕೆ ಹೆಚ್ಚಿಸಲು ಕಾರಣೀಭೂತರಾಗಿರುತ್ತಾರೆ.

**ಮಾನ್ಯರೇ, ಕೃಷಿ ವಿಶ್ವವಿದ್ಯಾನಿಲಯದ ಪರವಾಗಿ ತಮ್ಮನ್ನು 55ನೇ ಘಟಿಕೋತ್ಸವಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.**

ಇಂದಿನ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಪ್ರಖ್ಯಾತ ಭಾರತೀಯ ಜೈವಿಕ ತಂತ್ರಜ್ಞರು ಮತ್ತು ತಳಿಶಾಸ್ತ್ರಜ್ಞರಾದ ಡಾ. ತ್ರಿಲೋಚನ್ ಮಹಪಾತ್ರರವರನ್ನು ಸ್ವಾಗತಿಸಲು ಸಂತೋಷವಾಗುತ್ತದೆ. ಶ್ರೀಯುತರು ಏಪ್ರಿಲ್ 20, 1962 ರಂದು ಒಡಿಶಾದ ಕಟಕ್ ಜಿಲ್ಲೆಯ ಖಾರಿಬಿಲ್ ಗ್ರಾಮದಲ್ಲಿ ಜನಿಸಿದರು. ಇವರು ಬಿ.ಎಸ್ಸಿ (ಕೃಷಿ) ಪದವಿಯನ್ನು 1985 ರಲ್ಲಿ ಭುವನೇಶ್ವರದ ಒಡಿಶಾ ಕೃಷಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ, 1987 ರಲ್ಲಿ ತಳಿವಿಜ್ಞಾನದಲ್ಲಿ ಎಂ.ಎಸ್ಸಿ ಪದವಿಯನ್ನು ಹಾಗೂ 1992ರಲ್ಲಿ ತಳಿವಿಜ್ಞಾನದಲ್ಲಿ ಪಿಎಚ್.ಡಿ. ಪದವಿಗಳನ್ನು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಪಡೆದರು. ಶ್ರೀಯುತರು ಪ್ರಸ್ತುತ ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಮಹಾನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇದಕ್ಕೂ ಮೊದಲು ಶ್ರೀಯುತರು ನವದೆಹಲಿಯ ಪ್ರತಿಷ್ಠಿತ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ (ಐ.ಎ.ಆರ್.ಐ.) ನಿರ್ದೇಶಕರಾಗಿ ಮತ್ತು ರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಶ್ರೀಯುತರು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಸಸ್ಯ ಜೈವಿಕ ತಂತ್ರಜ್ಞಾನದ ರಾಷ್ಟ್ರೀಯ ಸಂಶೋಧನಾ ಕೇಂದ್ರದಲ್ಲಿ ಸಂಶೋಧಕರಾಗಿ ಹಾಗೂ ಅಧ್ಯಾಪಕರಾಗಿ ಸುಮಾರು 20 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಅವರು ಅಣು ಅನುವಂಶಿಕ ವಿಜ್ಞಾನ ಮತ್ತು ಜೀನೋಮಿಕ್ಸ್ ಕ್ಷೇತ್ರದ ಜಾಗತಿಕ ಖ್ಯಾತಿಯ ವಿಜ್ಞಾನಿಯಾಗಿದ್ದಾರೆ. ಶ್ರೀಯುತರು ಭಾರತದ ರಾಷ್ಟ್ರೀಯ ವಿಜ್ಞಾನಗಳ ಅಕಾಡೆಮಿ, ರಾಷ್ಟ್ರೀಯ ಕೃಷಿ ವಿಜ್ಞಾನಗಳ ಅಕಾಡೆಮಿ ಮತ್ತು ಭಾರತೀಯ ತಳಿಶಾಸ್ತ್ರ ಮತ್ತು ಸಸ್ಯ ತಳಿ ಸಂವರ್ಧನಾ ಸಂಘದ ಚುನಾಯಿತ ಸದಸ್ಯರಾಗಿದ್ದಾರೆ.

ಡಾ. ಮಹಪಾತ್ರರವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ 160ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದು ಹಲವಾರು ಪುಸ್ತಕ ಅಧ್ಯಾಯಗಳನ್ನು ರಚಿಸಿದ್ದಾರೆ. ಅಣು ಮಾರ್ಕರ್ ನೆರವಿನ ಆಯ್ಕೆ ವಿಧಾನದ ಮೂಲಕ ಬ್ಯಾಕ್ಟೀರಿಯಾ ಎಲೆ ಅಂಗಮಾರಿ ರೋಗ ನಿರೋಧಕ, ಅಧಿಕ ಇಳುವರಿ ನೀಡುವ ಮೊಟ್ಟಮೊದಲ ಬಾಸುಮತಿ ಭತ್ತದ ತಳಿಯ ಅಭಿವೃದ್ಧಿ ಮತ್ತು ಭತ್ತ ಹಾಗೂ ಟೊಮೆಟೊ ಬೆಳೆಗಳ ಭೌತಿಕ ಮ್ಯಾಪಿಂಗ್ ಹಾಗೂ ವಂಶವಾಹಿ ರೂಪದ ಸರಣಿ ಮಾಡಿರುವುದು ಅವರ ಸಂಶೋಧನಾ ಸಾಧನೆಗಳಾಗಿವೆ. ವಿಜ್ಞಾನ ಕ್ಷೇತ್ರಕ್ಕೆ ಅವರ ಕೊಡುಗೆಯು ಹೆಚ್ಚಿನ ಎಚ್–ಸೂಚ್ಯಂಕ ಮತ್ತು ಐ10 ಸೂಚ್ಯಂಕಗಳ ಮೂಲಕ ತಿಳಿದುಬರುತ್ತದೆ. ಜೀನೋಮಿಕ್ಸ್, ಫಿನೊಮಿಕ್ಸ್, ವಂಶವಾಹಿಗಳ ಬಯೋಪ್ರಾಸ್ಪೆಕ್ಟಿಂಗ್, ಆಲೀಲ್ ಮೈನಿಂಗ್ ಮತ್ತು ಕ್ರಿಯಾತ್ಮಕ ಜೀನೋಮಿಕ್ಸ್‌ಗಾಗಿ ಪ್ರಚೋದಿತ ಮ್ಯುಟಾಜೆನೆಸಿಸ್‌ನಂತಹ ಮುಂಚೂಣಿ ಕ್ಷೇತ್ರಗಳಲ್ಲಿ ಬೃಹತ್ ಸಂಶೋಧನಾ ಕಾರ್ಯಕ್ರಮಗಳನ್ನು ಶ್ರೀಯುತರು ಪ್ರಾರಂಭಿಸಿದರು. ಈ ವಿಧಾನದ ಅನುಸರಣೆಯ ಮೂಲಕ ಯಶಸ್ವಿ ಉತ್ಪನ್ನ ಅಭಿವೃದ್ಧಿಗೆ ಅನುವು ಮಾಡಿಕೊಟ್ಟ ಅಣು ತಳಿ ಅಭಿವೃದ್ಧಿ ಕ್ಷೇತ್ರದಲ್ಲಿ ತರಬೇತಿ ಪಡೆದ ಮಾನವ ಸಂಪನ್ಮೂಲ ರಚನೆಗೆ ಕಾರಣರಾಗಿದ್ದಾರೆ. ಇನ್ಸಾ ಯುವ ವಿಜ್ಞಾನಿ ಪ್ರಶಸ್ತಿ, ಪ್ರೊ. ಎಲ್.ಎಸ್.ಎಸ್. ಕುಮಾರ್ ಸ್ಮಾರಕ ಪ್ರಶಸ್ತಿ, ಎನ್.ಎ.ಎ.ಎಸ್.– ಟಾಟಾ ಪ್ರಶಸ್ತಿ, ಐ.ಎ.ಆರ್.ಐ.–ಬಿ.ಪಿ. ಪಾಲ್ ಪ್ರಶಸ್ತಿ, ಡಿ. ಬಿ. ಟಿ. ಜೈವಿಕ ವಿಜ್ಞಾನ ಪ್ರಶಸ್ತಿ, ಎನ್.ಎ.ಎಸ್.ಐ.– ರಿಲಯನ್ಸ್ ಇಂಡಸ್ಟ್ರೀಸ್ ಪ್ಲಾಟಿನಂ ಜ್ಯೂಬಿಲಿ ಪ್ರಶಸ್ತಿ, ಶ್ರೀ ಓಂ ಪ್ರಕಾಶ್ ಭಾಸಿನ್ ಪ್ರಶಸ್ತಿ 2016, ಐ.ಎಂ.ಎಸ್. ಡೈಮಂಡ್ ಜ್ಯೂಬಿಲಿ ಸ್ಮಾರಕ ಪ್ರಶಸ್ತಿ 2016 ಮತ್ತು ಡಾ. ಡಿ.ಸುಂದರೇಶನ್ ಸ್ಮಾರಕ ಉಪನ್ಯಾಸ ಪ್ರಶಸ್ತಿ 2017 ಗಳನ್ನೊಳಗೊಂಡಂತೆ ಹಲವಾರು ಪ್ರಶಸ್ತಿ ಸನ್ಮಾನಗಳಿಗೆ ತಮ್ಮ ಅತ್ಯುತ್ತಮ ಶೈಕ್ಷಣಿಕ ಮತ್ತು ಸಂಶೋಧನಾ ಕೊಡುಗೆಗಳಿಗಾಗಿ ಭಾಜನರಾಗಿದ್ದಾರೆ. ಸಸ್ಯ ಸುಧಾರಣೆಯಲ್ಲಿ ಮಹತ್ವದ ಕೊಡುಗೆಗಳಿಗಾಗಿ 2013–14ರ ದ್ವೈವಾರ್ಷಿಕ ರಾಷ್ಟ್ರೀಯ ಕೃಷಿ ವಿಜ್ಞಾನಗಳ ಅಕಾಡೆಮಿಯ ಮಾನ್ಯತೆ ಪ್ರಶಸ್ತಿಯನ್ನು ಮತ್ತು ಸಸ್ಯ ಅನುವಂಶಿಕ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆಯನ್ನು ಗುರುತಿಸಿ ಭಾರತೀಯ ಕೃಷಿ ಜೈವಿಕ ರಾಸಾಯನ ಶಾಸ್ತ್ರಜ್ಞರ ಭಾರತೀಯ ಅನುವಂಶಿಕ ಕಾಂಗ್ರೆಸ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ಸಹ ಶ್ರೀಯುತರಿಗೆ ನೀಡಿದ್ದಾರೆ.

Machinery Services to farmers, Promotion of Climate Smart Agriculture, Integrated Farming System – to name a few, which have driven the state's food production to a higher scale. He started 'Raitarondige Ondudina' (ರೈತರೊಂದಿಗೆ ಒಂದು ದಿನ) to understand and address the needs and requirements of farmers and the farming sector. Further, the Hon'ble Minister has been instrumental in enhancing Undergraduate seat reservation under agriculturist quota from 40 to 50 per cent.

**Sir, on be-half of the University, I heartily welcome you Sir to the 55$^{th}$ Convocation of the University.**

I am pleased to welcome the chief guest of today's function, **Dr. Trilochan Mohapatra,** who is a well know biotechnologist and geneticist in the country. Born on 20$^{th}$ April, 1962 at village Kharibil, Dist. Cuttack, Odisha and completed his B.Sc. (Agriculture) from OUAT, Bhubaneswar in 1985 and M.Sc. and then Ph.D. in Genetics from Indian Agricultural Research Institute, New Delhi in the year 1992. He is presently holding the position of Secretary, Department of Agricultural Research and Education & Director General, Indian Council of Agricultural Research.

Prior to this, he worked as the Director of the prestigious Indian Agricultural Research Institute (IARI), New Delhi and the Director of National Rice Research Institute (earlier Central Rice Research Institute). He served at the National Research Centre on Plant Biotechnology, IARI, New Delhi as a researcher and teacher for nearly 20 years. He is a scientist of international repute working in the area of molecular genetics and genomics. He is an elected fellow of the National Academy of Sciences, India, the National Academy of Agricultural Sciences, the Indian National Science Academy and the Indian Society of Genetics and Plant Breeding.

Dr. Mohapatra has over 160 research papers in national and international journals and several book chapters. His research accomplishments include development of the first high-yielding Basmati rice variety resistant to bacterial leaf blight through molecular marker assisted selection and physical mapping and genome sequencing of rice and tomato. His contribution to science is reflected from high h-index and i10 index. He initiated mega research programmes in frontier areas like genomics, phenomics, bioprospecting of genes, allele mining and induced mutagenesis for functional genomics. He created a large pool of trained human resource in the area of molecular breeding that has enabled successful product development. He has the distinction of receiving several honours and awards in recognition of his excellent academic and research contributions including the INSA Young Scientist Award, Prof. LSS Kumar Memorial Award, NAAS-Tata Award, IARI-BP Pal Award, DBT Bio-science Award, NASI-Reliance Industries Platinum Jubilee Award, Shri Om Prakash Bhasin Award 2016, IMS Diamond Jubilee Memorial Award 2016 and Dr. D. Sundaresan Memorial Oration Award 2017. He also received the Recognition Award of the National Academy of Agricultural Sciences in the biennium 2013-14 for significant contributions in Plant Improvement and the Life time Achievement Award of the Indian Genetics Congress in recognition of outstanding contribution in the field of Plant Genetics by the Indian Society of Agricultural Biochemists.

**ಸನ್ಮಾನ್ಯರೇ, ಇಂದು ನೀವು ನಮ್ಮೊಡನಿರುವುದು ಸಂತೋಷದ ವಿಷಯವಾಗಿದೆ. ನಿಮ್ಮನ್ನು ನಾನು ವಿಶ್ವವಿದ್ಯಾನಿಲಯದ 55ನೇ ಘಟಿಕೋತ್ಸವಕ್ಕೆ ಅತ್ಯಂತ ಹೃತ್ಪೂರ್ವಕ ಆದರದ ಸ್ವಾಗತವನ್ನು ಕೋರುತ್ತೇನೆ.**

ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣಾ ಮಂಡಳಿಯ ಸದಸ್ಯರಿಗೆ, ಶೈಕ್ಷಣಿಕ ಮಂಡಳಿಯ ಸದಸ್ಯರಿಗೆ, ಕರ್ನಾಟಕದ ಕೃಷಿ ವಿಶ್ವವಿದ್ಯಾನಿಲಯಗಳ ಹಾಲಿ ಹಾಗೂ ವಿಶ್ರಾಂತ ಕುಲಪತಿಗಳಿಗೆ, ವಿಶ್ರಾಂತ ಅಧಿಕಾರಿಗಳಿಗೆ ಹಾಗೂ ಆಡಳಿತ ನಿರ್ವಹಣಾ ಮಂಡಳಿ ಸದಸ್ಯರಿಗೆ, ಪ್ರತಿಷ್ಠಿತ ಆಹ್ವಾನಿತರಿಗೆ, ಗೌರವಾನ್ವಿತ ದಾನಿಗಳಿಗೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ, ನಿವೃತ್ತ ಸಿಬ್ಬಂದಿಯವರಿಗೆ ಹಾಗೂ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದವರಿಗೆ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ. ಈ ವರ್ಷ ಪದವಿ ಪಡೆಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಮತ್ತು ಕುಟುಂಬದವರಿಗೆ 55ನೇ ಘಟಿಕೋತ್ಸವಕ್ಕೆ ಆತ್ಮೀಯವಾಗಿ ಸ್ವಾಗತಿಸಲು ನನಗೆ ಅತ್ಯಂತ ಸಂತೋಷವಾಗುತ್ತಿದೆ.

**ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ 2020–21ರ ಸಾಲಿನ ಸಾಧನೆಗಳ ಸಂಕ್ಷಿಪ್ತ ವರದಿಯನ್ನು ನಿಮ್ಮ ಮುಂದಿಡಲು ನನಗೆ ವಿಶೇಷ ಗೌರವವೆನಿಸುತ್ತದೆ.**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು 1963ರಲ್ಲಿ ಆಗಿನ ಮೈಸೂರು ಸರ್ಕಾರವು ಶಾಸನದ ಕಾಯ್ದೆಯಡಿ ಸ್ಥಾಪಿಸಿದ್ದು, ವಿಶ್ವವಿದ್ಯಾನಿಲಯವು ತನ್ನ ಆಸ್ತಿತ್ವದ 58 ವರ್ಷಗಳನ್ನು ಪೂರ್ಣಗೊಳಿಸಿದೆಯೆಂದು ನೆರೆದಿರುವ ಗಣ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ದೇಶದ ಮುಂಚೂಣಿಯಲ್ಲಿರುವ ಕೃಷಿ ವಿಶ್ವವಿದ್ಯಾನಿಲಯಗಳಲ್ಲೊಂದಾಗಿದೆ.

## ಬೋಧನೆ

**ಈಗ ನಾನು ಬೋಧನಾ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಮಂಡಿಸುತ್ತೇನೆ**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಬೆಂಗಳೂರು, ಚಿಂತಾಮಣಿ, ಹಾಸನ, ಮಂಡ್ಯ ಹಾಗೂ ಚಾಮರಾಜನಗರಗಳಲ್ಲಿ ತನ್ನ ಐದು ಬೋಧನಾ ಆವರಣಗಳನ್ನು ಹೊಂದಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ತನ್ನ ಜಿ.ಕೆ.ವಿ.ಕೆ. ಆವರಣದಲ್ಲಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಆರು ಸ್ನಾತಕ ಪದವಿಗಳನ್ನು, ಎಂ.ಬಿ.ಎ. (ಎ.ಬಿ.ಎಮ್) ಒಳಗೊಂಡಂತೆ 23 ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು, 16 ವಿಷಯಗಳಲ್ಲಿ ಡಾಕ್ಟೊರಲ್ ಪದವಿ ಹಾಗೂ ಆಯ್ದ ಕೆಲವು ವಿಷಯಗಳಲ್ಲಿ ಪೋಸ್ಟ್ ಡಾಕ್ಟೊರಲ್ ಕಾರ್ಯಕ್ರಮಗಳನ್ನು ಒದಗಿಸುತ್ತಿದೆ. ಮಂಡ್ಯದ ಕೃಷಿ ಮಹಾವಿದ್ಯಾಲಯದಲ್ಲಿ ಸಹ ಐದು ವಿಷಯಗಳಲ್ಲಿ ಸ್ನಾತಕ್ಕೋತ್ತರ ಪದವಿಯನ್ನು ನೀಡಲಾಗುತ್ತಿದೆ. ವಿಶ್ವವಿದ್ಯಾನಿಲಯವು ಡಿಪ್ಲೊಮಾ ಕೋರ್ಸ್‌ಗಳನ್ನು ಸಹ ನಡೆಸುತ್ತಿದೆ – ಕೃಷಿಯಲ್ಲಿ ಡಿಪ್ಲೊಮಾ (2 ವರ್ಷಗಳು), ಬೇಕರಿ ತಂತ್ರಜ್ಞಾನದಲ್ಲಿ ಡಿಪ್ಲೊಮಾ (ಒಂದು ವರ್ಷ) ಮತ್ತು ನಿಯತವಾಗಿ ವಿವಿಧ ಅವಧಿಯ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಸಹ ನಡೆಸುತ್ತಿದೆ. ಕೃಷಿ ವಿಸ್ತರಣೆ ನಿರ್ವಹಣೆ (PGDAEM), ಕೃಷಿಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ (PGDA), ಸಮಗ್ರ ಬೇಸಾಯ ಪದ್ಧತಿಗಳ (IFS) ಕೋರ್ಸ್, ಹಣ್ಣು ಮತ್ತು ತರಕಾರಿಗಳ ಕೊಯ್ಲೋತ್ತರ ನಿರ್ವಹಣೆ (PHMFV) ಕೋರ್ಸ್, ಸಾವಯವ ಕೃಷಿ ಕೋರ್ಸ್ (OF) ಮತ್ತು ಕೃಷಿಯಲ್ಲಿ ಡಿಪ್ಲೊಮಾ (DIA) ಕುರಿತಂತೆ ದೂರ ಶಿಕ್ಷಣ ವಿಧಾನದಲ್ಲಿ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು ಒಳಗೊಂಡಂತೆ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳು ವಿವಿಧ ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ (CET) ಮೂಲಕವೇ ನಡೆಸಲಾಗುತ್ತಿದೆ.

**2020–21ರ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಾಧನೆಗಳ ಪಕ್ಷಿನೋಟ**

**ಪ್ರವೇಶಾತಿ**

- 2021–22ನೇ ಶೈಕ್ಷಣಿಕ ಸಾಲಿನಿಂದ ಬಿ.ಎಸ್ಸಿ (ಕೃಷಿ) ಮತ್ತು ತತ್ಸಮಾನ ಸ್ನಾತಕ ಪದವಿಗಳ ಹಾಗೂ ಎರಡು ವರ್ಷದ ಕೃಷಿ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಕೃಷಿಕರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗಾಗಿ ನಿಗದಿಪಡಿಸಲಾಗಿದ್ದ ಮೀಸಲಾತಿಯ ಪ್ರಮಾಣವನ್ನು ಶೇ.40 ರಿಂದ ಶೇ. 50ಕ್ಕೆ ಹೆಚ್ಚಿಸಲಾಗಿದೆ

**Sir, it is our pleasure to have you amidst us. I heartily extend our most cordial welcome to you Sir for the 55thConvocation of the University.**

I extend a warm welcome to the Members of the Board of Management of the University, the Members of the Academic Council and former Vice Chancellors, Officers and Members of Board of Management, Distinguished invitees, Esteemed Donors, Faculty, Employees, former staff members, and representatives of print and electronic media. I extend an affectionate welcome to the graduating students receiving degrees and to their parents and families.

**I consider it as a privilege to present a brief report of the accomplishments of the University during 2020-21.**

At the outset, I am happy to share with the celebrated gathering that the University of Agricultural Sciences, Bangalore was established in 1963 through an Act of Legislature by the erstwhile Government of Mysore and has now completed 58 years. UAS, Bangalore is one of the leading Agricultural Universities in the country.

## TEACHING

**I now present a brief report on the teaching activities**

University of Agricultural Sciences, Bangalore has five teaching campuses at Bengaluru, Chintamani, Hassan, Mandya and Chamarajanagara. UAS, Bangalore offers six Bachelor's Degree Programmes in Agriculture and allied fields, Master's Degree in 23 disciplines including MBA (ABM), Doctoral Degree in 16 disciplines and Post-doctoral programmes in some of the selected disciplines at GKVK campus. Master's degree is also offered in five disciplines at College of Agriculture, Mandya. The University also offers Diploma courses namely, Diploma in Agriculture (2 years), Diploma in Baking Technology (One Year) and Certificate courses of different durations on regular basis. Diploma and certificate courses by distance education mode is offered in Agricultural Extension Management (PGDAEM), Postgraduate Diploma in Agriculture (PGDA), Integrated Farming System (IFS) course, Post-Harvest Management of Fruits and Vegetables (PHMFV) course, Organic Farming (OF) course and Diploma in Agriculture (DIA). UAS-B and all other Farm Universities in our state have opted to admit the students through Common Entrance Test (CET) conducted by the Karnataka Examination Authority for various Undergraduate Programmes.

### Highlights of Achievements of UAS-B during 2020-21

### Admissions

- Reservation in admission to UG programmes & Diploma courses in Farm Universities of Karnataka for the children of Farmers and Agricultural labourers has been increased from 40% to 50% during the academic year 2021-22

- 2020–21ನೇ ಸಾಲಿನಲ್ಲಿ ಒಟ್ಟು 901 ವಿದ್ಯಾರ್ಥಿಗಳು ಸ್ನಾತಕ ಪದವಿಗೆ ಪ್ರವೇಶಾತಿ ಪಡೆದಿರುತ್ತಾರೆ. ಅದರಲ್ಲಿ 58 ವಿದ್ಯಾರ್ಥಿಗಳು ಐಸಿಎಆರ್, 51 ವಿದ್ಯಾರ್ಥಿಗಳು ಎನ್.ಆರ್.ಐ ಕೋಟಾದಡಿಯಲ್ಲಿ ಮತ್ತು ಒಬ್ಬರು ವಿದ್ಯಾರ್ಥಿ ವಿದೇಶಿಗರಾಗಿರುತ್ತಾರೆ

- ಸ್ನಾತಕೋತ್ತರ ಪದವಿಗೆ ಒಟ್ಟು 348 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಅದರಲ್ಲಿ 75 ವಿದ್ಯಾರ್ಥಿಗಳು ಐಸಿಎಆರ್/ಜೆಎನ್‌ಯು ಮತ್ತು 15 ಎನ್‌ಆರ್‌ಐ ವಿದ್ಯಾರ್ಥಿಗಳಾಗಿರುತ್ತಾರೆ

- ಡಾಕ್ಟೋರಲ್ ಪದವಿಗೆ ಒಟ್ಟು 110 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಅದರಲ್ಲಿ 23 ವಿದ್ಯಾರ್ಥಿಗಳು ಐಸಿಎಆರ್ ಮತ್ತು ಒಬ್ಬರು ಎನ್‌ಆರ್‌ಐ ವಿದ್ಯಾರ್ಥಿಯಾಗಿದ್ದಾರೆ

- ಇದಲ್ಲದೆ, 2020–21ರ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 53 ವಿದ್ಯಾರ್ಥಿಗಳು ಮಂಡ್ಯ ಆವರಣದಲ್ಲಿ ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಮತ್ತು 11 ವಿದ್ಯಾರ್ಥಿಗಳು ಚಿಂತಾಮಣಿ ಆವರಣದಲ್ಲಿ ಎರಡು ವರ್ಷಗಳ ಡಿಪ್ಲೊಮಾ (ರೇಷ್ಮೆಕೃಷಿ) ಕಾರ್ಯಕ್ರಮದಡಿಯಲ್ಲಿ ಸೇರ್ಪಡೆಯಾಗಿದ್ದಾರೆ

**ವಿದ್ಯಾರ್ಥಿ ವೇತನಗಳು**

- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸ್ನಾತಕ ಪದವಿ ಕಾರ್ಯಕ್ರಮಗಳಡಿಯಲ್ಲಿ ಒಟ್ಟು– 78 ವಿದ್ಯಾರ್ಥಿಗಳಿಗೆ ಮೆರಿಟ್ ವಿದ್ಯಾರ್ಥಿ ವೇತನ, 430 ವಿದ್ಯಾರ್ಥಿಗಳಿಗೆ ಸಾಮಾನ್ಯ ಅರ್ಹತಾ ವಿದ್ಯಾರ್ಥಿ ವೇತನಗಳನ್ನು ಹಾಗೂ 09 ವಿದ್ಯಾರ್ಥಿಗಳಿಗೆ ದಾನಿಗಳು ಕೊಡಮಾಡುವ ವಿದ್ಯಾರ್ಥಿ ವೇತನಗಳನ್ನು ನೀಡಿದೆ

- ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಡಿಯಲ್ಲಿ ಒಟ್ಟು 82 ವಿದ್ಯಾರ್ಥಿಗಳಿಗೆ ಕೃಷಿ ವಿಶ್ವವಿದ್ಯಾಲಯದ ಸ್ಥಾನಿಕ ಅರ್ಹತಾ ವಿದ್ಯಾರ್ಥಿ ವೇತನಗಳನ್ನು ಹಾಗೂ 04 ವಿದ್ಯಾರ್ಥಿಗಳಿಗೆ ದಾನಿಗಳು ಕೊಡುವ ಶಿಷ್ಯ ವೇತನಗಳನ್ನು ನೀಡಿದೆ

- ಅದೇರೀತಿ ಮಂಡ್ಯ ಕೃಷಿ ಕಾಲೇಜಿನ ಆವರಣದಲ್ಲಿ ಒಟ್ಟು 10 ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಸ್ಥಾನಿಕ ಅರ್ಹತಾ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ

- ಜಿ.ಕೆ.ವಿ.ಕೆ. ಆವರಣದಲ್ಲಿ ಒಟ್ಟು 41 ಪಿಎಚ್.ಡಿ. ಪದವಿ ವಿದ್ಯಾರ್ಥಿಗಳಿಗೆ ಕೃಷಿ ವಿಶ್ವವಿದ್ಯಾನಿಲಯದ ಸ್ಥಾನಿಕ ಅರ್ಹತಾ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ

- ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹಾಗೂ ಇತರ ಸಹಯೋಗ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 69 ಶಿಕ್ಷಕರು/ವಿಜ್ಞಾನಿಗಳನ್ನು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ಶಿಕ್ಷಕರೆಂದು ಗುರುತಿಸಲಾಗಿದೆ

**ವಿಶ್ವವಿದ್ಯಾನಿಲಯ ಪರೀಕ್ಷಾ ಕೇಂದ್ರವು ಪರಿಚಯಿಸಿರುವ ಶೈಕ್ಷಣಿಕ ಸುಧಾರಣೆಗಳು**

1. ಸ್ನಾತಕ ಪದವಿ ಶೈಕ್ಷಣಿಕ ನಿರ್ವಹಣೆ (UGAM) ತಂತ್ರಾಂಶವನ್ನು ಸ್ನಾತಕೋತ್ತರ ಪದವಿಗಳ ಸ್ವಯಂಚಾಲನಾ ಕಾರ್ಯಗಳಿಗೆ ಹೊಂದಿಕೊಳ್ಳುವಂತೆ ಬಳಕೆಗೆ ಮೇಲ್ದರ್ಜೆಗೆ ಏರಿಸಲಾಗಿದೆ

2. ಬೋಧಕರು 24x7ರ ಅವಧಿಯಲ್ಲಿ ತಮ್ಮ ಕಾಲೇಜುಗಳಿಂದಲೇ ಮೌಲ್ಯ ಮಾಪನವನ್ನು ಮಾಡಬಹುದಾದ 'ವಿಕೇಂದ್ರೀಕೃತ ಡಿಜಿಟಲ್ ಮೌಲ್ಯಮಾಪನ' ಪದ್ಧತಿಯನ್ನು ಅನುಷ್ಠಾನಗೊಳಿಸಲಾಗಿದ್ದು, ಇದರಿಂದ ಸಮಯ ಮತ್ತು ವಿಶ್ವವಿದ್ಯಾನಿಲಯದ ಸಂಪನ್ಮೂಲಗಳ ಉಳಿತಾಯ ಸಾಧ್ಯವಾಗುತ್ತದೆ

3. ವಿಶ್ವವಿದ್ಯಾನಿಲಯ ಪರೀಕ್ಷಾ ಕೇಂದ್ರವು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಪದವಿಗಳಿಗೆ ಆನ್‌ಲೈನ್ ಮೂಲಕ ಪರೀಕ್ಷೆ ಮತ್ತು ಮೌಲ್ಯಮಾಪನಗಳನ್ನು ನಡೆಸಿ ಸುಮಾರು 4910 ಕಿ.ಗ್ರಾಂನಷ್ಟು ಕಾಗದದ ಬಳಕೆಯನ್ನು ಉಳಿತಾಯ ಮಾಡುವುದರ ಮೂಲಕ ಸುಮಾರು 982 ಕಿ.ಗ್ರಾಂ ಇಂಗಾಲದ ಡೈಆಕ್ಸೈಡ್ ಪರಿಸರಕ್ಕೆ ಹೊರಸೂಸುವಿಕೆಯನ್ನು ಸಹ ತಡೆಗಟ್ಟಲಾಗಿದೆ

- During the Academic year 2020-21, a total of 901candidates were admitted to Bachelor's Degree Programmes at UAS-B, which includes 58 ICAR students, 51 NRI quota students & one Foreign National
- For Masters' Degree Programmes, 348 candidates have been admitted, of which 75 are ICAR/ JNU students and 15 are NRI students
- For Doctoral Degree Programmes a total of 110 students have got admission, which includes 23 ICAR candidates and one NRI student
- Apart from this, a total of 53 students have been admitted to Two years Diploma (Agri.) course offered at Mandya Campus and 11students have been admitted to Two years Diploma (Seri.) course offered at Chintamani Campus

**University Scholarships**

- University has awarded 78 UAS Merit Scholarships, 430 General Merit Scholarships and 09 Donors Scholarships to students pursuing various UG degree programmes offered at different campuses
- University has awarded University Resident Merit Scholarships to 82 students and Donor Scholarship to 04 students pursuing Masters Degrees Programmes. 10 students have been awarded with Resident Merit Scholarships at College of Agriculture, VC Farm, Mandya under Master's Degree programmes
- Under the Ph.D. degree programmes at GKVK, Bengaluru, 41 students have been awarded with University Resident Merit Scholarships
- During this academic year, 69 teachers/scientists from UAS-B and other collaborative research institutions have been recognized as Postgraduate Teachers of UAS-B

**Academic Reforms Introduced by the University Examination Centre**

1. Under Graduate Academic Management Software (UGAM) has been upgraded and extended to academic activities of PG programmes
2. Introduced 'Decentralized Digital Evaluation' on 24 x 7 basis, to carry out evaluation process from the respective colleges, which is saving time and resources of the University
3. The University Examination Centre conducted online examinations and evaluation during II semester of the academic year 2019-20 and avoided carbon dioxide ($CO_2$) emission to the tune of 982 kg by reducing the use of 4910 kg of white paper for the conduct of examinations, postal charges etc.

4. 2020–21ರ ಶೈಕ್ಷಣಿಕ ವರ್ಷದಲ್ಲಿನ ಲಾಕ್‌ಡೌನ್ ಅವಧಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲ ಆವರಣಗಳಲ್ಲಿ ಸ್ನಾತಕ ಪದವಿಗಳ ಆನ್‌ಲೈನ್ ಬೋಧನೆ ಹಾಗೂ ಪರೀಕ್ಷಾ ಕಾರ್ಯಗಳು ಸುಗಮವಾಗಿ ನಡೆಸುವಂತೆ ವಿಶ್ವವಿದ್ಯಾನಿಲಯ ಪರೀಕ್ಷಾ ಕೇಂದ್ರವು ಸಂಯೋಜಿಸಿದೆ

5. ಕಾಗದ ರಹಿತ ಮತ್ತು ನಗದು ರಹಿತ ಆನ್‌ಲೈನ್ ನೊಂದಣೀಕರಣವನ್ನು ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 2020–21ರ ಎರಡನೇ ಸೆಮಿಸ್ಟರ್‌ನಿಂದ ಅನುಷ್ಠಾನಗೊಳಿಸಲಾಯಿತು

**ವಿದ್ಯಾರ್ಥಿ ಶೈಕ್ಷಣಿಕ ಸಾಧನೆಗಳು**

- 2020–21ರ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು 48 ಸ್ನಾತಕೋತ್ತರ ವಿದ್ಯಾರ್ಥಿ ವೇತನಗಳನ್ನು ಹಾಗೂ 25 JRF/SRF ಪಡೆಯುವದರೊಂದಿಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವು ದೇಶದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ 1 ನೇ ಸ್ಥಾನವನ್ನು ಪಡೆದುಕೊಂಡಿದೆ
- ವಿಶ್ವವಿದ್ಯಾನಿಲಯದ 109 ವಿದ್ಯಾರ್ಥಿಗಳು ICAR-NET Exam ನಲ್ಲಿ ತೇರ್ಗಡೆ ಹೊಂದಿದ್ದಾರೆ ಹಾಗೂ ವಿಶ್ವವಿದ್ಯಾನಿಲಯವು ಒಟ್ಟಾರೆ ಅಖಿಲ ಭಾರತ ಮಟ್ಟದಲ್ಲಿ ತೃತೀಯ ಸ್ಥಾನವನ್ನು ಪಡೆಯಲಾಗಿದೆ
- ಜಿ.ಕೆ.ವಿ.ಕೆ.ಯ ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾನಿಲಯದಲ್ಲಿ 15 ವಿದ್ಯಾರ್ಥಿಗಳು GATE ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಹಾಗೂ ಒಬ್ಬ ವಿದ್ಯಾರ್ಥಿಯು CAT ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾನೆ
- ಎಂ.ಟೆಕ್. ವಿದ್ಯಾರ್ಥಿಗಳಾದ ಶುಭಜಿತ್ ಸರ್ಕೆಲ್ ಮತ್ತು ರಕ್ಷಿತ ಕೆ. ಇವರು ಐಸಿಎಆರ್–ರಾಷ್ಟ್ರೀಯ ಉನ್ನತ ಶಿಕ್ಷಣ ಯೋಜನೆ ಮತ್ತು ಕೃಷಿ ಇಂಜಿನಿಯರಿಂಗ್ ವಿಭಾಗ ಇವರು ಭಾರತೀಯ ಕೃಷಿ ಅನುಸಂಧಾನ ಪರಿಷತ್ – ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಪ್ರಾಯೋಜನೆ ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಕೃಷಿ ಇಂಜಿನಿಯರಿಂಗ್ ವಿಭಾಗವು ಆಯೋಜಿಸಿದ್ದ 'ಫಾರ್ಮ್ ಯಾಂತ್ರೀಕರಣದಲ್ಲಿ ನಾವೀನ್ಯತೆಯ ಉತ್ತೇಜನ' ಕುರಿತು ಆಯೋಜಿಸಿದ್ದ ರಾಷ್ಟ್ರಮಟ್ಟದ ಕೃಷಿಟೆಕ್ ಹ್ಯಾಕಥಾನ್ – KRIAGYA ದಲ್ಲಿ ಭಾಗವಹಿಸಿದ್ದರು ಹಾಗೂ ದಕ್ಷಿಣ ವಲಯ ಮಟ್ಟದ ತಾಂತ್ರಿಕ ಮೌಲ್ಯಮಾಪನ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿರುತ್ತಾರೆ
- ಶ್ರೀ ಸಂಕೇತ್, ಸಿ.ವಿ., ಪಿಎಚ್.ಡಿ ವಿದ್ಯಾರ್ಥಿ, ಕೃಷಿ ವಿಸ್ತರಣಾ ವಿಭಾಗ, ಜಿಕೆವಿಕೆ ಇವರು ಸುಸ್ಥಿರ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ಜಾಗತಿಕ ಸಂಶೋಧನಾ ಉಪಕ್ರಮಗಳ (GRISAAS–2020) ಕುರಿತು ನಡೆದ ಅಂತರರಾಷ್ಟ್ರೀಯ ವೆಬ್ ಸಮ್ಮೇಳನದ ಸಂದರ್ಭದಲ್ಲಿ ಭಾಗವಹಿಸಿದ್ದು ಇವರಿಗೆ ಕೃಷಿ ವಿಸ್ತರಣಾ ಕ್ಷೇತ್ರದಲ್ಲಿ ನೀಡಿದ ಅತ್ಯುತ್ತಮ ಕೊಡುಗೆಗಾಗಿ "ಯುವ ವೃತ್ತಿಪರ ಪ್ರಶಸ್ತಿ"ಯನ್ನು ಪ್ರದಾನ ಮಾಡಲಾಯಿತು
- ಸ್ನಾತಕೋತ್ತರ ವಿದ್ಯಾರ್ಥಿನಿಯಾದ ಕು. ಶ್ವೇತಾ ಕೌಜಲಗಿ ಇವರು ಪ್ಲಾಂಟ್ ಬಯೋಟೆಕ್ನಾಲಜಿಯಲ್ಲಿ ಪಿಎಚ್.ಡಿ. ಕಾರ್ಯಕ್ರಮವನ್ನು ಮುಂದುವರಿಸಲು ಜಪಾನ್ ಸರ್ಕಾರವು ಪ್ರಾಯೋಜಿಸಿದ MEXT ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿರುತ್ತಾರೆ
- NAHEP-IG ಸಹಯೋಗದೊಂದಿಗೆ ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು ಇವರು ಸ್ಮಾರ್ಟ್ ಕೃಷಿಗಾಗಿ ICT ಆಧಾರಿತ ಇ–ಸಂಪನ್ಮೂಲಗಳ ಕುರಿತು ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯ ನಂತರದ ಆತ್ಮನಿರ್ಭರ ಭಾರತದೆಡೆಗೆ ಪಯಣ ಎಂಬ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಅತ್ಯುತ್ತಮ ಮೌಖಿಕ ನಿರೂಪಣಾ ಪ್ರಶಸ್ತಿ ಮತ್ತು ಪೇಪರ್ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿಗಳನ್ನು ಗಳಿಸಿದ್ದಾರೆ
- ಕೃಷಿ ವಿಶ್ವವಿದ್ಯಾನಿಲಯವು, ವೆಸ್ಟರನ್ ಸಿಡ್ನಿ ವಿಶ್ವವಿದ್ಯಾನಿಲಯ, ಆಸ್ಟ್ರೇಲಿಯಾದ ಸಹಯೋಗದೊಂದಿಗೆ Bioinformatics, Predictive Analytic ಮತ್ತು Scientific Writing ಮೂರು ಅನ್‌ಲೈನ್ ವರ್ಚುಯಲ್ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ

4. In 2020-21, during COVID-19 lockdown also, online classes and examinations were held for UG programmes across different campuses of the University

5. Introduced online cashless and paperless semester registration process for PG Students from II semester of 2020-21

**Student Academic Achievements**

- UAS-B has secured 1st position among all the Farm Universities of the country by obtaining 48 PG Scholarships and 25 JRF/SRF during 2020-21

- UAS-B has secured 3rd position among 70 Agricultural Universities in the country with 109 students having cleared ICAR-NET Examination during 2020-21

- 15 students from the College of Agricultural Engineering at GKVK qualified in GATE examination and one student has cleared the CAT examination

- M.Tech. students Mr. Shubbajit Sarkhel and Ms. Rakshitha participated in KRIAGYA- A National level Agtech Hackathon on "Promoting Innovation in Farm Mechanization" organized by ICAR and secured first position at the South Zonal Level Technical Evaluation

- Mr. Sanketh, Ph.D. Scholar in Agricultural Extension, was conferred with "Young Professional Award" for his outstanding contribution in Agricultural Extension on the occasion of International Web Conference on Global Research Initiatives for Sustainable Agriculture and Allied Sciences

- Ms. Swetha Koujalagi, M.Sc. (Agri.) in Plant Biotechnology has been selected for MEXT scholarship of Japan Government to persue Ph.D. programme

- University students participated in the National Conference on "ICT based e-resources for smart agriculture – A Journey Towards Atmanirbhar Bharat Post COVID-19 Pandemic Situation" organized at Raichur and won the Best Oral and Poster Presentation awards

- University in association with Western Sydney University, Australia started virtual course on Bioinformatics, Predictive Analytics and Scientific Writing

- ವಿಶ್ವವಿದ್ಯಾನಿಲಯವು ಕೇಂದ್ರಿಕೃತ ಯಂತ್ರೋಪಕರಣಗಳ ಸೌಲಭ್ಯವನ್ನು ಜಿಕೆವಿಕೆ ಆವರಣದಲ್ಲಿ ಭಾ.ಕೃ.ಅ.ಪ. ಇದರ ಅನುದಾನದಡಿಯಲ್ಲಿ ಸ್ಥಾಪಿಸಲಾಗಿದೆ
- ವಿಶ್ವವಿದ್ಯಾನಿಲಯದ 33 ಸ್ನಾತಕ ಪದವೀದರರು ಕ್ಯಾಂಪಸ್ ಆಯ್ಕೆ ಮೂಲಕ IDBI Bank, IFFCO, Kisan Sanchar Ltd. ಮತ್ತು TECSOK ಹಾಗೂ ಇತರೆ ಸಂಸ್ಥೆಗಳಿಗೆ ಆಯ್ಕೆಯಾಗಿದ್ದಾರೆ

**ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಜ್ಞಾನ ಸಪ್ತಾಹ 2020**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ವಿಜ್ಞಾನ ಸಪ್ತಾಹ 2020 : ಸ್ನಾತಕೋತ್ತರ ವಿದ್ಯಾರ್ಥಿಗಳ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. 77 ಪಿಎಚ್.ಡಿ. ವಿದ್ಯಾರ್ಥಿಗಳು 'ಆನ್‌ಲೈನ್' ಮೂಲಕ ಬೆಳೆ ಸುಧಾರಣೆ, ಬೆಳೆ ಉತ್ಪಾದನೆ, ಸಸ್ಯ ಸಂರಕ್ಷಣೆ ಮತ್ತು ಸಾಮಾಜಿಕ ವಿಜ್ಞಾನಗಳು ಮತ್ತು ಇತರ ವಿಷಯಗಳೆಂಬ ನಾಲ್ಕು ವಿಷಯಗಳಡಿ ಮೌಖಿಕ ಮಂಡನೆಗಳನ್ನು ಮಾಡಿದರು.

## ಸಂಶೋಧನೆ

ಕೋವಿಡ್–19 ಸಾಂಕ್ರಾಮಿಕವು ನಮ್ಮ ದೈನಂದಿನದ ಆಹಾರ ಪದ್ಧತಿಯನ್ನು ಪುನರ್ ವ್ಯಾಖ್ಯಾನಿಸಿದೆ ಮತ್ತು ಆರೋಗ್ಯಕರ ಆಹಾರದ ಸೇವನೆ, ಸಾರ್ವಜನಿಕ–ಆರೋಗ್ಯ, ಆಹಾರ ಮತ್ತು ಕೃಷಿ ಕ್ಷೇತ್ರಗಳ ಸಹಯೋಗದ ಸಬಲೀಕರಣ ಮತ್ತು ವೈವಿಧ್ಯಮಯ ಬೆಳೆಗಳನ್ನು ಬೆಳೆಯುವುದಕ್ಕೆ ರೈತರನ್ನು ಉತ್ತೇಜಿಸಲು ಮತ್ತು ದೀರ್ಘಕಾಲಿಕ ಕ್ರಮಗಳನ್ನು ಅಳವಡಿಸುವುದು ಅಗತ್ಯವಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಪರಿಸ್ಥಿತಿಗೆ ಆದ್ಯತೆ ನೀಡುತ್ತ ಕೃಷಿ ವಿಶ್ವವಿದ್ಯಾನಿಲಯವು 2020–21ರ ಸಂಶೋಧನಾ ಕಾರ್ಯಕ್ರಮಗಳನ್ನು ಮರು–ಸಂಘಟಿಸಿ ಕಾರ್ಯಗತ ಗೊಳಿಸಲಾಗಿತ್ತು. ಪ್ರಸ್ತುತ ವರ್ಷದಲ್ಲಿ ಪೋಷಕಾಂಶ ಭರಿತ ಬೆಳೆಗಳಾದ ಸಿರಿ ಧಾನ್ಯಗಳ ಕ್ಷೇತ್ರ ಪ್ರಯೋಗಕ್ಕಾಗಿ ಹಾಗೂ ಪ್ರಾತ್ಯಕ್ಷಿಕೆಗಳಲ್ಲಿ ಪ್ರದರ್ಶಿಸಲು ಗುರುತಿಸಲಾಗಿದೆ ಹಾಗೂ ಬರುವ ದಿನಗಳಲ್ಲಿ ಈ ಬೆಳೆಗಳನ್ನು ಆಹಾರ ಕ್ರಮದಲ್ಲಿ ಮತ್ತೆ ಪರಿಚಯಿಸಬಹುದಾಗಿದೆ ಮತ್ತು ಬೆಳೆ ವೈವಿದ್ಯತೆಯನ್ನು ಹೆಚ್ಚಿಸಬಹುದಾಗಿದೆ. ಜೊತೆಯಲ್ಲಿ ಪರಿಣಾಮಕಾರಿ ಮತ್ತು ಪರಿಸರ ಸಮರ್ಥನೀಯ ಬೆಳೆ ಉತ್ಪಾದನೆಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಲಾಗಿದೆ.

ಆಹಾರ ಭದ್ರತೆಯನ್ನು ಖಾತರಿಪಡಿಸುವುದರ ಜೊತೆಗೆ ಉತ್ಪಾದಕತೆಯನ್ನು ಹೆಚ್ಚಿಸಿ, ಯಾವುದೇ ವ್ಯತಿರಿಕ್ತ ಪರಿಣಾಮಗಳಿಲ್ಲದೆ ಕೃಷಿ ಸಂಪನ್ಮೂಲಗಳ ದಕ್ಷತೆಯನ್ನು ಹೆಚ್ಚಿಸುವ ಹಾಗೂ ರೈತರ ಆದಾಯ ಮತ್ತು ಸಾಮಾಜಿಕ ಸ್ಥಿತಿಯ ಗುಣಮಟ್ಟವನ್ನು ಸುಧಾರಿಸುವಂತಹ ಹಾಗು ಸಣ್ಣ ಹಿಡುವಳಿದಾರರು ಮತ್ತು ಕೃಷಿ ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು ಅದರ ವ್ಯಾಪ್ತಿಯ 4 ಕೃಷಿ ವಲಯಗಳಲ್ಲಿಯ 10 ಜಿಲ್ಲೆಗಳಲ್ಲಿರುವ ತನ್ನ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸ್ಥಳ ನಿರ್ದಿಷ್ಟ, ಕಾರ್ಯತಂತ್ರವನ್ನು ಮತ್ತು ನಿರೀಕ್ಷಿತ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಿದೆ. ಎಲ್ಲಾ ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸಮಗ್ರ ಕೃಷಿ ಪದ್ಧತಿಗಳನ್ನ ಅಳವಡಿಸಲಾಗಿದೆ ಮತ್ತು ರೈತರ ಆರ್ಥಿಕ ಸಬಲೀಕರಣಕ್ಕಾಗಿ ಹಾಗೂ ಅವರ ಆದಾಯವನ್ನು ದ್ವಿಗುಣಗೊಳಿಸುವ ಉದ್ದೇಶದಿಂದ ಎಲ್ಲಾ ಸಂಶೋಧನಾ ಕೇಂದ್ರಗಳಲ್ಲಿ ಮಾದರಿ ಸಮಗ್ರ ಕೃಷಿ ಪದ್ಧತಿಗಳ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಲಾಗಿದೆ.

**ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು (31–03–2021ರಂತೆ)**

ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಒಟ್ಟು 280 ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿದ್ದು, ಅವುಗಳಲ್ಲಿ 31 ಅಖಿಲ ಭಾರತ ಸಹಯೋಜಿತ ಸಂಶೋಧನಾ ಪ್ರಾಯೋಜನೆಗಳು, 14 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳು, 8 ಗೌರವಾನ್ವಿತ ವಿಜ್ಞಾನಿಗಳ ಪ್ರಾಯೋಜನೆಗಳು, 8 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾತ್ಪೂರಿತ ಪ್ರಾಯೋಜನೆಗಳು, 66 ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ ಡಿ.ಬಿ.ಟಿ.), 39 ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು; 38 ಇತರೆ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು ಹಾಗೂ 76 ಕೃ.ವಿ.ವಿ. ಅನುದಾನಿತ ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿವೆ.

- University has expanded the Central Instrumentation facility at GKVK campus by providing various analytical services under one umbrella through ICAR grants
- Thirty-three graduates from University have secured placements in Banking sector and Agri-entrepreneural organizations

**UAS-B Science Week 2020: PG Students' Symposium**

University has organized virtual 'UAS-B Science Week 2020: PG Students' Symposium' wherein 77 out going Ph.D. students presented under four thematic groups *viz.,* Crop Improvement, Crop Production, Plant Protection, Social Sciences and others

## RESEARCH

COVID-19 pandemic has re-defined our food habits and the present situation demands long-term measures for promoting healthy diet and encouraging farmers to produce a wider range of food crops thus, strengthening public-health. In this context, the University has re-designed its research activities on prioritizing nutriti-rich crops such as small millets and pseudo-cereals for farm trials and demonstrations. These crops enhance crop diversity and ensure nutritional security. Additionally, efficient and eco-friendly crop production technologies have been developed by the University.

Our scientists and researchers coordinate location specific, strategic and anticipatory research programmes at 13 Agricultural Research Stations across four agroclimatic zones covering 10 southern districts of Karnataka. The programmes are well designed to address the issues of small and marginal stakeholders and improve their standard of living while ensuring food security, improving productivity and efficient resource management. The concept of Integrated Farming system has been accepted & well adopted by the stakeholders. Model IFSs at all our research stations intended for economic empowerment with the main focus of doubling on farmer's income.

**Projects in Operation (As on 31-03-2021)**

Totally, 280 research projects are in operation, of which 31 are All India Coordinated Research Projects, 31 All India Network Projects,14 RKVY projects, 8 Emeritus Scientist projects, 8 ICAR *Ad-hoc* projects, 66 Government of India Projects (DST/DBT), 39 Government of Karnataka Projects and 38 projects are funded by allied agencies and 76 University Sponsored Research projects.

**ಅನುಮೋದಿಸಲಾದ ಹೊಸ ಪ್ರಾಯೋಜನೆಗಳು**

2020–21ರ ಸಾಲಿನಲ್ಲಿ 59 ಹೊಸ ಪ್ರಾಯೋಜನೆಗಳು ಮಂಜೂರಾಗಿದ್ದು, ಅದರ ಮೊತ್ತ ರೂ. 2642 ಲಕ್ಷಗಳು.

ಕೃಷಿ ವಿಶ್ವವಿದ್ಯಾನಿಲಯವು CRISPR / CAS ಯೋಜನೆಯ ಮುಖೇನ ಜಿನೋಮ್ ತಂತ್ರಜ್ಞಾನದ ಮುಖಾಂತರ ಭತ್ತದಲ್ಲಿ ರೋಗ ಮತ್ತು ಕಳೆಯ ನಿರ್ವಹಣೆಯನ್ನು ಏರೋಬಿಕ್ ಮತ್ತು ನೀರಾವರಿ ಆಶ್ರಯದಲ್ಲಿ ರೂ. 271 ಲಕ್ಷಗಳೊಂದಿಗೆ ಹಮ್ಮಿಕೊಳ್ಳಲಾಗಿದೆ.

ವಿಶ್ವವಿದ್ಯಾನಿಲಯವು "ಸೆಂಟರ್ ಆಫ್ ಎಕ್ಸಲೆನ್ಸ್ ಆನ್ ವಾಟರ್‌ಶೆಡ್ ಮ್ಯಾನೇಜ್‌ಮೆಂಟ್" ಅನ್ನು ವಿಶ್ವ ಬ್ಯಾಂಕ್‌ನ ರಿವಾರ್ಡ್ ಕಾರ್ಯಕ್ರಮದಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ಅಣುಗಳು**

ವಿಶ್ವವಿದ್ಯಾನಿಲಯವು 348 ಹೊಸ ತಳಿಗಳು/ ಸಾಲುಗಳು/ರಾಸಾಯನಿಕಗಳು / ಅಣುಗಳನ್ನು ಪೀಡೆ / ರೋಗ/ ಕಳೆ / ನಿಯಂತ್ರಣಕ್ಕಾಗಿ / ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು, ಅವುಗಳಿಂದ ಒಟ್ಟು ರೂ. 436 ಲಕ್ಷ ಆದಾಯವನ್ನು ಗಳಿಸಿದೆ.

**ಸಂಶೋಧನೆಯ ಪ್ರಮುಖಾಂಶಗಳು**

**ಪ್ರಮುಖ ಸಂಶೋಧನೆ**

- ಸೌತೆಕಾಯಿ ಮೊಸಾಯಿಕ್ ವೈರಸ್(ಸಿಎಮ್‌ವಿ)ನ ಆರಂಭಿಕ ಮತ್ತು ತ್ವರಿತ ಪತ್ತೆಗಾಗಿ ಆಣ್ವಿಕ ಪಾಲಿಮರೇಸ್ ಚೈನ್ ರಿಯಾಕ್ಷನ್ (ಪಿಸಿಆರ್) ಮತ್ತು ಲ್ಯಾಟರಲ್ ಫ್ಲೋ ಇಮ್ಯುನೊ ಸ್ಟ್ರಿಪ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ
- ಪಪ್ಪಾಯಿಗೆ ಸೋಂಕು ತರುವ ಪಪ್ಪಾಯಿ ರಿಂಗ್ ಸ್ಪಾಟ್ ವೈರಸ್ (ಪಿಆರ್‌ಎಸ್‌ವಿ) ಅನ್ನು ಮೊದಲೇ ಪತ್ತೆಹಚ್ಚಲು ಬಯೋಸೆನ್ಸರ್‌ನ ಅಭಿವೃದ್ಧಿ ಕ್ಷೇತ್ರ ಮಟ್ಟದಲ್ಲಿ ಪ್ರಾಥಮಿಕ ಹಂತದಲ್ಲಿಯೇ ಗಮನಿಸಲು ಪರಿಣಾಮಕಾರಿಯಾಗಿದೆ.
- ಸ್ಲ್ಯಾಗ್ ಅಧಾರಿತ ಜಿಪ್ಸಂ ಮತ್ತು ಕೃಷಿಯಲ್ಲಿ ಅದರ ಬಳಕೆ. ಕ್ಷೇತ್ರ ಮಟ್ಟದಲ್ಲಿ ವಿವಿಧ ಬೆಳೆಗಳಿಗೆ (ಭತ್ತ, ಮುಸುಕಿನ ಜೋಳ ಮತ್ತು ಶೇಂಗಾ) 300–750 ಕೆ.ಜಿ. ಸ್ಲ್ಯಾಗ್ ಅಧಾರಿತ ಜಿಪ್ಸಂ ಅನ್ನು ಬಳಕೆ ಮಾಡಿ ಹೆಚ್ಚುವರಿ ಇಳುವರಿಯನ್ನು ಪಡೆಯಲಾಗಿದೆ. ಜೊತೆಯಲ್ಲಿ, ಭೂಮಿಯ ಗುಣಮಟ್ಟದ ಸುಧಾರಣೆಯನ್ನು ಕೂಡ ಗಮನಿಸಬಹುದಾಗಿರುತ್ತದೆ
- ಹಾಲು ತಂಪಾಗಿಸಲು ಘನ ಸ್ಥಿತಿಯ ಕೂಲಿಂಗ್ ಮಾಡ್ಯೂಲ್‌ನ ಅಭಿವೃದ್ಧಿ. ಸದರಿ ಸಂಶೋಧನೆಯು ಬಹು ವಿಶ್ವಾಸಾರ್ಹ, ಶಬ್ದ ರಹಿತ, ಹೊಂದಿಕೊಳ್ಳುವ, ಪರಿಸರ ಸ್ನೇಹಿ ಮತ್ತು ಆರ್ಥಿಕವಾಗಿ ಸದೃಢ (ಖರ್ಚು ಮತ್ತು ಲಾಭದ ಅನುಪಾತ 1.18:1)
- ರಾಗಿ ಬೆಳೆಯ ಮೇಲೆ ಪ್ರಥಮ ಬಾರಿಗೆ ಸ್ಪೋಡೋಪ್ಟೆರಾ ಫ್ರೂಜಿಪರ್ಡಾ ಕೀಟವನ್ನು ವರದಿ ಮಾಡಲಾಗಿದೆ.
- ಸ್ಥಳೀಯ ಶಿಲೀಂಧ್ರಗಳಿಂದ ಪ್ರತ್ಯೇಕವಾದ UASBBl6 ಶಿಲೀಂಧ್ರವು ಕಬ್ಬು ಮತ್ತು ಅಡಿಕೆಯಲ್ಲಿ ಕಾಡುವ ಗೊಣ್ಣೆ ಹುಳುಗಳ ನಿಯಂತ್ರಣಕ್ಕೆ ಸಹಕಾರಿಯಾಗಿದೆ
- 2020–21ರ ಅವಧಿಯಲ್ಲಿ, ಒಟ್ಟು 117 (ITS 2 - 67; Mt COI – 50) ಡಿ.ಎನ್.ಎ ಅನುಕ್ರಮಗಳನ್ನು 31 ಜಾತಿಯ ನುಸಿಗಳ ಮೇಲೆ ಪಡೆದು, ಎನ್.ಸಿ.ಬಿ.ಐ– ಜೀನ್ ಬ್ಯಾಂಕ್ ಡೇಟಾಬೇಸ್‌ಗೆ ಸಲ್ಲಿಸಲಾಗಿದೆ

## New Research Projects

Fifty-nine new research projects were sanctioned new to the University during 2020-21 by various funding agencies with a total outlay of Rs.26.42 crores.

University has implemented the project CRISPR / CAS – mediated multiplex genome editing of disease and herbicide tolerance traits in rice for improved performance under aerobic and irrigated situations with a total outlay of Rs. 271 lakhs.

University is implementing "Centre of Excellence on Watershed Management" under REWARD programme sponsored by World Bank.

## New Chemicals/ Varieties/ Molecules Tested

The University has undertaken the testing of 348 new crop varieties/lines/ chemicals/molecules for control of pests /diseases / weeds / soil analysis and agricultural equipment and generated a revenue of Rs. 436 lakhs.

## Research Highlights

### Break-through Research

- Developed PCR and lateral flow immuno strips for early and rapid detection of Cucumber Mosaic Virus (CMV) in the lab and field
- Validation and field evaluated biosensor for early detection of Papaya Ring Spot Virus (PRSV) at field level
- *Slag based gypsum (SBG) application and its utilization in agriculture:* Field trials with 300-750 kg/ha significantly increases the yield of different crops (paddy, maize and groundnut) in different soils as compared to commercially available gypsum. Properties of SBG to act as a soil conditioner would increase the nutrient uptake and improve nutrient use efficiency
- Solid state cooling module developed for raw milk cooling is compact, reliable, noiseless, flexible, eco-friendly and economical (B:C ratio of 1.18:1)
- The incidence of *Spodoptera frugiperda* on finger millet is reported for the first time
- A native fungal isolate UASB Bb16 showed promising results against sugarcane and arecanut white grubs
- During 2020-21, 117 DNA sequences (ITS2 - 67; MtCOI - 50) of 31 species of mites are deposited in NCBI - Gene Bank database. So far DNA data generated for 60 species of plant associated mites and 18 species of agriculturally important mites have been barcoded using DNA data

**ಅಭಿವೃದ್ಧಿ ಪಡಿಸಲಾಗಿದರುವ ಮೊಬೈಲ್ ಅಪ್‌ಗಳು**

- ಡಯಾಬಿಟಿಕ್ ಡಯಟ್ ಕೇರ್ ಆಪ್ ಅನ್ನು ಡಯಟ್ ಕೇರ್ ಮೂಲಕ ಮಧುಮೇಹ ನಿರ್ವಹಣೆಗಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಶೈಕ್ಷಣಿಕ ಸಾಧನವಾಗಿ ಅಭಿವೃದ್ಧಿಪಡಿಸಲಾಗಿದೆ
- ಬೀಜ ಆಧಾರ, ಮೊಬೈಲ್ ಆಪ್ ಮತ್ತು ವೆಬ್ ಪುಟವನ್ನು ಬೀಜ ಉತ್ಪಾದಕರು, ಗ್ರಾಹಕರು ಮತ್ತು ಬೀಜದ ಪಾಲುದಾರರಿಗೆ ಸುಸ್ಥಿರ ಕೃಷಿ ಉತ್ಪಾದನಾ ವ್ಯವಸ್ಥೆಯ ಸುಧಾರಣೆಗಾಗಿ ಸಾಮಾನ್ಯ ವೇದಿಕೆಯನ್ನು ಸೃಷ್ಟಿಸಲು ಅಭಿವೃದ್ಧಿಪಡಿಸಲಾಗಿದೆ
- ಫಾರ್ಮ್ ಕ್ಯಾಲ್ಕುಲೇಟರ್ ಆಪ್ ಅನ್ನು ಅಭಿವೃದ್ಧಿ ಪಡಿಸಲಾಗಿದ್ದು ಅದು ರಸಗೊಬ್ಬರಗಳ ಲೆಕ್ಕಾಚರ, ಬೀಜ ದರ ಮತ್ತು ಸಸ್ಯ ಜನ ಸಂಖ್ಯೆಯ ಲೆಕ್ಕಾಚಾರಕ್ಕೆ ಸಿದ್ಧ ಕ್ಯಾಲ್ಕುಲೇಟರ್ ಆಗಿದೆ
- ಕೃಷಿ ಕೀಟ ಮುನ್ಸೂಚನೆ ಮತ್ತು ಸಲಹಾ (ಎಪಿಪಿಎ) ರೈತರು ಯಾವಾಗ ಬೇಕಾದರೂ ಸ್ಥಳೀಯ ಹವಾಮಾನ ಪರಿಸ್ಥಿತಿ ಮತ್ತು ಸಲಹೆಯ ಆಧಾರದ ಮೇಲೆ ಕೀಡಗಳ ತೀವ್ರತೆಯ ಮೇಲೆ ಭವಿಷ್ಯವನ್ನು ಪಡೆಯಬಹುದು
- ನೆಕ್ಸ್ಟ್ ಜನರೇಷನ್ ಟೆಕ್ನಾಲಜಿ (NGT) ತಜ್ಞರ ಮೂಲಕ ಕ್ಷೇತ್ರದಲ್ಲಿ ಕೀಟಗಳು ಮತ್ತು ರೋಗಗಳನ್ನು ನಿರ್ವಹಿಸಲು ತಜ್ಞರ ಸಿಸ್ಟಂ ಆಪ್ ಅನ್ನು ರೈತರ ಪರವಾಗಿ ಪ್ರತ್ಯೇಕ ರೈತರು ಅಥವಾ ಕೀಟ ಮಾನಿಟರ್‌ಗಳು ವರದಿ ಮಾಡುತ್ತಾರೆ

**ಬಿಡುಗಡೆ ಮಾಡಿದ ತಳಿಗಳು**

2020–21ರಲ್ಲಿ ಒಟ್ಟು 10 ಹೊಸ ತಳಿಗಳನ್ನು ಬಿಡುಗಡೆಗೆ ಶಿಫಾರಸ್ಸು ಮಾಡಲಾಗಿದ್ದು, ಅವುಗಳಲ್ಲಿ ಎರಡು ಭತ್ತ ಹಾಗೂ ತಲಾ ಒಂದರಂತೆ ರಾಗಿ, ನವಣೆ, ಸಾಮೆ, ಬರಗು, ಬೀಜದಂಟು, ಕಬ್ಬು, ಮೇವಿನ ತೋಕೆಗೋಧಿ ಮತ್ತು ಹಲಸು ಬೆಳೆಗಳ ತಳಿಗಳಾಗಿವೆ.

**ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೆ ಶಿಫಾರಸ್ಸು ಮಾಡಲಾದ ನೂತನ ತಾಂತ್ರಿಕತೆಗಳು**

ವಿವಿಧ ಬೆಳೆಗಳ ವಿಷಯಗಳಲ್ಲಿ ಒಟ್ಟು 28 ನೂತನ ತಾಂತ್ರಿಕತೆಗಳನ್ನು ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೆ ಶಿಫಾರಸ್ಸು ಮಾಡಲಾಗಿದ್ದು, 5 ಬೆಳೆ ಅಭಿವೃದ್ಧಿ, 8 ಬೆಳೆ ಉತ್ಪಾದನೆ, 10 ಬೆಳೆ ಸಂರಕ್ಷಣೆ, 3 ರೇಷ್ಮೆ ಕೃಷಿ, 1 ಜೇನು ಕೃಷಿ ಹಾಗೂ 1 ಕೃಷಿ ಇಂಜಿನಿಯರಿಂಗ್ ತಂತ್ರಜ್ಞಾನವನ್ನು ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರಿಸಲಾಗಿದೆ.

**ಪಡೆಯಲಾಗಿದರುವ ಪೇಟೆಂಟ್‌ಗಳು**

ಸುಧಾರಿತ ಲೂಪ್–ಮಧ್ಯಸ್ಥ ಐಸೊಥರ್ಮಲ್ ಅಪ್ಲಿಕೇಶನ್ ವಿಧಾನದ ಎರಡು ಪೇಟೆಂಟ್‌ಗಳು ಪೇಟೆಂಟ್‌ನೊಂದಿಗೆ ದಾಳಿಂಬೆಯಲ್ಲಿ ಸುಪ್ತ Xap ಸೋಂಕನ್ನು ಪತ್ತೆಹಚ್ಚಲು ಪೇಟೆಂಟ್ ಮತ್ತು ಕಬ್ಬು ಪ್ರಸರಣಕ್ಕಾಗಿ ಮತ್ತೊಂದು ಪೇಟೆಂಟ್ ಪಡೆಯಲಾಗಿದೆ. ಒಟ್ಟಾರೆ ಆರು ವಿವಿಧ ಅರ್ಜಿಗಳನ್ನು ಪೇಟೆಂಟ್‌ಗಳ ಪರವಾನಿಗೆಗಾಗಿ ಸಲ್ಲಿಸಲಾಗಿರುತ್ತದೆ.

**ಪ್ರಗತಿಯಲ್ಲಿರುವ ಮುಖ್ಯ ತಾಂತ್ರಿಕತೆಗಳು ಸಂಶೋಧನೆಗಳು**

**ಬೆಳೆ ಅಭಿವೃದ್ಧಿ**

- ಭತ್ತದಲ್ಲಿನ ಪರಿಶುದ್ಧತೆಯನ್ನು ನಿರ್ಧರಿಸಲು ವಿಶಿಷ್ಟ ಎಸ್.ಎಸ್.ಆರ್. ಮಾರ್ಕರ್‌ಗಳನ್ನು ಗುರುತಿಸಲಾಯಿತು
- 5405 ಭತ್ತದ ಲ್ಯಾಂಡ್ ರೇಸ್‌ಗಳನ್ನು 30 ವಿವಿಧ ವಿಶಿಷ್ಟತೆ, ಏಕರೂಪತೆ ಮತ್ತು ಸ್ಥಿರತೆಯ ಗುಣಲಕ್ಷಣಗಳಿಗಾಗಿ ಮೌಲ್ಯಮಾಪನ ಮಾಡಲಾಯಿತು. ಮುಂದುವರೆದು, ಲ್ಯಾಂಡ್ ರೇಸ್‌ಗಳಲ್ಲಿ ಬೆಂಕಿರೋಗ, ಎಲೆ ಕವಚ ಬೆಂಕಿರೋಗಕ್ಕೆ ನಿರೋಧಕತೆ ಮತ್ತು ಕಂದು ಜಿಗಿ ಹುಳುವಿನ ಬಾಧೆಗೆ ಸಹಿಷ್ಣುತೆಯುಳ್ಳ ಸಾಲುಗಳನ್ನು ಆಯ್ಕೆ ಮಾಡಲಾಯಿತು

**Mobile Apps Developed**

- Diabetic diet care App was developed as an educational tool to create awareness among public for the management of diabetes by diet care
- BeejAadhar mobile App and webpage have been developed to create common platform for the seed producers, consumers and stakeholders
- Farm Calculator App is developed for easy calculation of fertilizers requirement, seed rate and plant population computation instantly
- Agricultural Pest Prediction and Advisory (APPA) useful to farmers to obtain pest severity prediction information details based on local weather condition and advisory services
- Next Generation Technology (NGT) Expert System App for managing pests and diseases in the field

**New Varieties Released**

Ten new varieties were released, two in Rice and one each in Ragi, Foxtail Millet, Little Millet, Proso Millet, Grain Amaranth, Sugarcane, Fodder Oats and Jack.

**New Technologies Developed forInclusion in Package of Practices**

Twenty-eight new technologies in Crop Improvement (5), Crop Production (8), Crop Protection (10), Sericulture (3), Apiculture (1) and Agricultural Engineering (1) were recommended & included in the Package of Practices.

**Patents**

Two patents were granted, one on Enhanced Loop-Mediated Isothermal Amplification Method for Detecting Latent Xap infection in pomegranate and the other on Apparatus-cum-Method for sugarcane propagation. Six applications were filed for grant of patents during this year.

**Research in Progress**

**Crop Improvement**

- Identified unique SSR markers for determination of genetic purity of Rice seeds
- 5405 rice land races were characterized for 30 DUS characters

- ರಾಗಿಯಲ್ಲಿ ಕೆ.ಎಂ.ಆರ್. 702, ಕೆ.ಎಂ.ಆರ್. 704, ಕೆ.ಎಂ.ಆರ್. 708 ಮತ್ತು ಕೆ.ಎಂ.ಆರ್. 609 ತಳಿಗಳನ್ನು ಆಶಾಧಾಯಕ ತಳಿಗಳೆಂದು ಗುರುತಿಸಲಾಗಿದೆ
- ಸೂರ್ಯಕಾಂತಿ ಬೆಳೆಯ ಕೆ.ಬಿ.ಎಸ್.ಎಚ್–85 ಮತ್ತು ಕೆ.ಬಿ.ಎಸ್.ಎಚ್–88 ಸಂಕರಣ ತಳಿಗಳನ್ನು ಅಖಿಲ ಭಾರತ ಮಟ್ಟದಲ್ಲಿ ಸಂಕರಣ ತಳಿ ಪ್ರಯೋಗ–2ರ (ಎ.ಎಚ್.ಟಿ–2) 2021ಕ್ಕೆ ನಾಮನಿರ್ದೇಶನ ಮಾಡಲಾಗಿದೆ
- ಭಾರತದ ಮೊದಲ ಅಧಿಕೃತ ತರಕಾರಿ ಸೋಯಾಬೀನ್ ತಳಿ ಕೆಬಿವಿಎಸ್–1 (ಕರುಣೆ) ಯನ್ನು ದಿನಾಂಕ 12–03–2021 ನಡೆದ 51ನೇ ವಾರ್ಷಿಕ ಸೋಯಾ ಅವರೆ ಕಾರ್ಯಾಗಾರದ ತಳಿ ಗುರುತಿಸುವ ಸಮಿತಿ ಸಭೆಯಲ್ಲಿ ದಕ್ಷಿಣ ವಲಯಕ್ಕೆ ಬಿಡುಗಡೆ ಮಾಡಲು ಗುರುತಿಸಲಾಗಿದೆ

**ಬೀಜ ವಿಜ್ಞಾನ**

ಮೆಕ್ಕೆ ಜೋಳದ ಮಿಶ್ರತಳಿಗಳಾದ MAH–14–5 ಮತ್ತು ಹೇಮಾದಲ್ಲಿ ಅನನ್ಯ ಎಸ್ ಎಸ್ ಆರ್ ಮತ್ತು ಎಸ್ ಎನ್ ಪಿ ಗುರುತುಗಳನ್ನು ಗುರುತಿಸಲಾಗಿದೆ ಮತ್ತು ಪೋಷಕರ ರೇಖೆಗಳ ಅನುವಂಶಿಕ ಶುದ್ಧತೆಯನ್ನು ಪರೀಕ್ಷಿಸಲು ಮತ್ತು ಮೆಕ್ಕೆ ಜೋಳದಲ್ಲಿ ಗುಣಮಟ್ಟದ ಬೀಜ ಉತ್ಪಾದನೆಗೆ ಪರೀಕ್ಷಿಸಲು ಸಹಕಾರಿಯಾಗಿದೆ.

**ಬೆಳೆ ಉತ್ಪಾದನೆ**

ನವಣೆ ಮತ್ತು ಬರಗು ಬೆಳೆಗಳನ್ನು ತೊಗರಿ ಬೆಳೆಯೊಂದಿಗೆ 6:1 ಮತ್ತು 8:1 ಅನುಪಾತದಲ್ಲಿ ಮಿಶ್ರ ಬೆಳೆಯಾಗಿ ಬೆಳೆಯುವ ವಿಧಾನವನ್ನು ಏಕೈಕ ಬೆಳೆಯಾಗಿ ಬೆಳೆಯುವ ವಿಧಾನಕ್ಕೆ ಹೋಲಿಸಿದರೆ ಉತ್ತಮ ಧಾನ್ಯದ ಇಳುವರಿ ಮತ್ತು ಲಾಭದಾಯಕವಾಗಿರುವುದು ಕಂಡುಬಂದಿದೆ.

**ಖುಷ್ಕಿ ಬೇಸಾಯ**

ರಾಗಿ + ತೊಗರಿ (8:2) ಅಂತರ ಬೆಳೆಯಲ್ಲಿ ಸಂರಕ್ಷಿತ ಬೇಸಾಯ ಪದ್ಧತಿಯ ಧೃಡೀಕರಣ: ಆಧುನಿಕ ಬೇಸಾಯ ಪದ್ಧತಿಯೊಂದಿಗೆ ಹುರುಳಿಯನ್ನು ಹೊದಿಕೆ ಬೆಳೆಯಾಗಿ ಬೆಳೆಯುವುದರಿಂದ ರಾಗಿಯಲ್ಲಿ ಹೆಚ್ಚಿನ ಇಳುವರಿ ಕಂಡು ಬಂದಿದೆ.

**ರೇಷ್ಮೆ ಕೃಷಿ**

ಉಷ್ಣವಲಯದ ಸಮುದ್ರ ಕಳೆಗಳ (Sulfated galactans) ಸಾರಗಳನ್ನು 1.5 ಮಿ.ಲೀ./ ಲೀ. ಸಾಂದ್ರತೆಗಳಲ್ಲಿ ಸಮರುವಿಕೆಯಾದ 21 ಮತ್ತು 30 ದಿನಗಳ ನಂತರ ಎಲೆಗಳ ಮೇಲೆ ಸಿಂಪಡಿಸಿದಾಗ ಗುಣಮಟ್ಟದ ಎಲೆಯನ್ನು ಹಾಗೂ ಬೆಳವಣಿಗೆಯನ್ನು ಪಡೆಯಬಹುದು.

**ಸಸ್ಯ ಸಂರಕ್ಷಣೆ**

**ಸಸ್ಯ ರೋಗಶಾಸ್ತ್ರ**

ದಕ್ಷಿಣ ಭಾರತದಲ್ಲಿ (ಬೆಂಗಳೂರು ಮತ್ತು ಮಂಡ್ಯ) ಮೊದಲ ಬಾರಿಗೆ ಊದಲು ಬೆಳೆಯಲ್ಲಿ ಎಲೆ ಬೆಂಕಿರೋಗವನ್ನು ದಾಖಲಿಸಲಾಗಿದೆ. ಲಕ್ಷಣಗಳ ಅಧ್ಯಯನದ ಪ್ರಕಾರ ರೋಗಕಾರಕವನ್ನು ಪೈರಿಕ್ಯುಲೇರಿಯಾ ಪ್ರಭೇದ ಎಂದು ಗುರುತಿಸಲಾಗಿದೆ

**ಕೀಟಶಾಸ್ತ್ರ**

- ಸಮಗ್ರ ಕೀಟ ನಿರ್ವಹಣಾ ಕ್ರಮಗಳನ್ನು ಅಳವಡಿಸಿದಾಗ ಕಡಿಮೆ ಪ್ರಮಾಣದ ಬಾಧಿತ ಹೂ, ಕಡಿಮೆ ಪ್ರಮಾಣದ ಕೀಡೆಗಳು ಪ್ರತಿ 20 ಹಸಿರು ಕಾಯಿಗಳಿಗೆ, ಹಸಿರು ಮತ್ತು ತೆರೆದ ಕಾಯಿಗಳಲ್ಲಿ ಕಡಿಮೆ ಪ್ರಮಾಣದ ತೊಳೆಗಳ ಬಾಧೆ ಕಂಡುಬಂದು, ಅತಿ ಹೆಚ್ಚಿನ ಇಳುವರಿ ಪಡೆಯಲಾಗಿದೆ (19.25 ಕ್ವಿ/ ಹೆ).

- In Finger Millet KMR 702, KMR 704, KMR 708 and KMR 609 are identified as promising genotypes
- Sunflower hybrid KBSH 85 & KBSH 88 were advanced to AHT-II during 2021
- First vegetable soybean variety KBVS 1 (Karune) was released for Southern Zone

**Seed Technology**

Identified unique SSR and SNP markers in maize hybrids MAH-14-5 and Hema to test the genetic purity of parental lines.

**Crop Production**

Foxtail and Proso millet intercropping with Redgram in the ratio of 6:1 and 8:1 was found most productive and profitable.

**Dry land Agriculture**

Growing finger millet + Redgram (8:2) with horsegram as cover crop under conventional tillage recorded higher grain yield of finger millet.

**Sericulture**

Applicaion of cultivated tropical sea plant extract (with sulfated galactans) @ 1.5 ml/lit. 21and 30 days after pruning is efficient in enhancing the plant growth and leaf quality parameters in mulberry.

**Crop Protection**

**Plant Pathology**

Leaf Blast on barnyard millet was recorded for the first time in south India (Bengaluru and Mandya) and pathogen was identified as *Pyricularia* sp.

**Entomology**

- IPM module has recorded less rosette flower, less number of pink bollworm larvae / 20 green bolls, minimum green boll damage, minimum locule damage in green bolls, minimum open boll locule damage. Higher cotton yield (19.25/ha) with a net return of Rs.49,900.00/ha.

- 60 ಜಾತಿಯ ಸಸ್ಯ ಸಂಬಂಧಿ ಹುಳಗಳಿಗೆ ಉತ್ಪಾದಿಸಿದ ಡಿ.ಎನ್.ಎ. ಅನುಕ್ರಮ ದತ್ತಾಂಶ (ಸಿಒಐ ಮತ್ತು ಐಟಿಎಸ್ 2) ಮತ್ತು 18 ಪ್ರಮುಖ ಕೃಷಿ ಹುಳಗಳ ಡಿ.ಎನ್.ಎ. ಬಾರ್ಕೋಡಿಂಗ್ ಪೂರ್ಣಗೊಂಡಿದೆ.

**ಗೃಹ ವಿಜ್ಞಾನ (ಆಹಾರ ಮತ್ತು ಪೋಷಣೆ)**

ಅಖಿಲ ಭಾರತ ಸುಸಂಘಟಿತ ಪ್ರಾಯೋಜನೆ (ಆಹಾರ ವಿಜ್ಞಾನ)ಯು ಸ್ಥಳೀಯವಾಗಿ ಲಭ್ಯವಿರುವ ಆಹಾರವನ್ನು ಬಳಸಿ ಆಹಾರ ಮಿಶ್ರಣಗಳನ್ನು ಅಭಿವೃದ್ಧಿಪಡಿಸಿದೆ. ಸದರಿ ಮಿಶ್ರಣವು ಬೊಜ್ಜು ಮತ್ತು ಮಧುಮೇಹಕ್ಕೆ ಅಧಿಕ ಫೈಬರ್ ಆಹಾರ ಮಿಶ್ರಣ, ಮಧುಮೇಹಕ್ಕೆ ಕಡಿಮೆ ಗ್ಲೈಸೆಮಿಕ್ ಸೂಚ್ಯಂಕ ಆಹಾರ ಮಿಶ್ರಣ ಮತ್ತು ಪೌಷ್ಠಿಕಾಂಶವನ್ನು ಪಡೆಯಲು ಸಹಕಾರಿಯಾಗಿರುತ್ತದೆ.

**ಕೊಯ್ಲೋತರ ಕೃಷಿ ಇಂಜಿನಿಯರಿಂಗ್ ತಂತ್ರಜ್ಞಾನ**

- ಗಂಟೆಗೆ ಸುಮಾರು 100 ಕಿ.ಗ್ರಾಂ., ಸಾಮರ್ಥ್ಯವಿರುವ ಹುಣಸೆಹಣ್ಣಿನ ಬೀಜ ಬಿಡಿಸುವ ಯಂತ್ರದ ಮೂಲ ಮಾಧರಿಯನ್ನು ಅಭಿವೃದ್ಧಿಪಡಿಸಲಾಗಿದೆ. ಈ ಯಂತ್ರವನ್ನು ವಲಯ–5 ZREP–2021ರಲ್ಲಿ ವಾಣಿಜ್ಯೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ.
- ಸಿರಿಧಾನ್ಯಗಳಿಗೆ ಸೂಕ್ತವಾದ ಹೊಟ್ಟು ತೆಗೆಯುವ ಯಂತ್ರದ ಮಾದರಿಯನ್ನು ಅಭಿವೃದ್ಧಿಪಡಿಸಲಾಗಿದೆ. ಈ ಯಂತ್ರವನ್ನು ವಲಯ–5 ZREP–2021ರಲ್ಲಿ ವಾಣಿಜ್ಯೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ.

**ಜೈವಿಕ ಗೊಬ್ಬರ ಪ್ರಾಯೋಜನೆ ಮತ್ತು ಗುಣನಿಯಂತ್ರಣ ಪ್ರಯೋಗಾಲಯ**

- 14 ಟನ್‌ಗಳಷ್ಟು ಧಾರಣ ಆಧಾರಿತ ಜೈವಿಕ ಗೊಬ್ಬರಗಳು ಮತ್ತು 8500 ಲೀಟರ್ ದ್ರವ್ಯ ರೂಪದ ಜೈವಿಕ ಗೊಬ್ಬರವನ್ನು ತಯಾರಿಸಿ ಮಾರಾಟ ಮಾಡಲಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ರೂ.24.00 ಲಕ್ಷ ಆದಾಯವನ್ನು ತಂದುಕೊಟ್ಟಿದೆ.
- 35 ಜೈವಿಕ ಗೊಬ್ಬರಗಳ ಖಾಸಗಿ ಸಂಸ್ಥೆಗಳ 380 ಮಾದರಿಗಳ ಮೌಲ್ಯಮಾಪನ ಪರೀಕ್ಷೆಯಿಂದ ಸುಮಾರು ರೂ. 6.05 ಲಕ್ಷಗಳಷ್ಟು ಆದಾಯವನ್ನು ಗಳಿಸಿದೆ.

**ಜೈವಿಕ ಇಂಧನ ಪ್ರಾಯೋಜನೆ**

2,897 ಲೀಟರ್‌ಗಳಷ್ಟು ಜೈವಿಕ ಇಂಧನ, 25,494 ಕಿ.ಗ್ರಾಂನಷ್ಟು ಹೊಂಗೆ ಹಿಂಡಿ ಮತ್ತು 1,581 ಲೀಟರ್‌ಗಳಷ್ಟು ಜೈವಿಕ ಎಣ್ಣೆಯನ್ನು ಮಾರಾಟ ಮಾಡಲಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ರೂ. 11.8 ಲಕ್ಷ ಆದಾಯವನ್ನು ತಂದುಕೊಟ್ಟಿದೆ.

**ಬೀಜ ಉತ್ಪಾದನೆ**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಬೀಜ ಪ್ರಾಯೋಜನೆಯು 1,000 ಕ್ವಿಂಟಾಲ್‌ಗಳ ಸಂವರ್ಧಕ ಬೀಜ ಮತ್ತು 12,226 ಕ್ವಿಂಟಾಲ್‌ಗಳ ಗುಣಮಟ್ಟದ ಬೀಜಗಳನ್ನು 2020–21ನೇ ಸಾಲಿನಲ್ಲಿ ಉತ್ಪಾದಿಸಿದೆ.

**ಕೃಷಿ ಇನ್‌ಕ್ಯೂಬೇಶನ್ ಕೇಂದ್ರ**

ವಿಶ್ವವಿದ್ಯಾನಿಲಯದಲ್ಲಿ ಒಟ್ಟು 30 ಇನ್‌ಕ್ಯುಬೆಟೀಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ ಡೆಂಡ್ರೈಟ್ ಲ್ಯಾಬೋರೇಟರೀಸ್ ಪ್ರೈ. ಲಿಮಿಟೆಡ್, ಇವರು 'ಟೊಮೆಟೊದಲ್ಲಿ ಬ್ಯಾಕ್ಟೀರಿಯಾ ರೋಗ ಪತ್ತೆಗಾಗಿ' C-CAMP ವತಿಯಿಂದ ರೂ.50 ಲಕ್ಷಗಳ ಯೋಜನೆಯನ್ನು ಪಡೆದುಕೊಂಡಿರುತ್ತಾರೆ.

- DNA sequence data (COI and ITS 2) generated for 60 species of plant associated mites and DNA barcoding of 18 species of agriculturally important mites is completed.

**Food and Nutrition**

AICRP (FN) has developed High Fibre Food Mix for obesity and diabetes, Low Glycemic Index Food Mix for diabetes, Nutri-dense Food Mix & Paustic Laddu for improving body weight and attain nutritional quality by using locally available foods.

**Post Harvest Engineering and Technology**

- A prototype Tamarind Deseeder operated by a 3 hp electric motor has been developed and it has been recommended for commercialization in the Zone-5
- Proto type Small Millets Dehuller has been developed and it has been recommended for commercialization in the Zone-5

**Popularization of Biofertilizers and Quality Control Laboratory**

- Fourteen tonnes of carrier based biofertilizers and 8500 litres of Liquid bio-inoculants were produced and sold to farmers realizing an income of Rs.24 lakhs
- 380 samples received from 35 commercial biofertilizer companies were analyzed for quality parameters and generated an income of Rs. 6.05 lakhs

**Biofuel Park Project**

2,897 litres of Biofuel, 25,494 kgs of Pongamia cake and 1,581 litres of Pongamia oil were produced and sold, earning an income of Rs. 11.8 lakhs

**Seed Production**

University has produced 1000 quintals of Breeder Seeds and 12,226 quintals of quality seeds during 2020-21.

**Agri Incubation Centre**

30 incubatees are working with the University. One of UAS-B incubatees, Dendrite Laboratories Pvt. Ltd., has got the project on ‘Kit for Bacterial Disease Detection in Tomato’ with a budget outlay of 50 lakhs from C-CAMP

## ವಿಸ್ತರಣೆ

ವಿಸ್ತರಣಾ ನಿರ್ದೇಶನಾಲಯದ ವಿವಿಧ ಘಟಕಗಳು ನಡೆಸಿದ ವಿಸ್ತರಣಾ ಚಟುವಟಿಕೆಗಳು ಈ ಕೆಳಗಿನಂತಿವೆ;

### ರೈತ ತರಬೇತಿ ಸಂಸ್ಥೆ

ರೈತ ತರಬೇತಿ ಸಂಸ್ಥೆಯು 21 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ 532 ಜನ ರೈತರಿಗೆ ತರಬೇತಿ ನೀಡಿದೆ. ಕೌಶಲ್ಯ ಆಧಾರಿತ ತರಬೇತಿಗಳಿಗೆ ಒತ್ತು ನೀಡಲಾಗಿತ್ತು.

### ಸಿಬ್ಬಂದಿ ತರಬೇತಿ ಘಟಕ

ಈ ಘಟಕವು ಅಭಿವೃದ್ಧಿ ಇಲಾಖೆಗಳ ಹಾಗೂ ಬೆಂಗಳೂರು ಕೃ.ವಿ.ವಿ.ಯದ ಒಟ್ಟು 994 ಸಿಬ್ಬಂದಿಗಳಿಗೆ 22 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ರಾಜ್ಯ ಕೃಷಿ ನಿರ್ವಹಣೆ ಹಾಗೂ ವಿಸ್ತರಣಾ ತರಬೇತಿ ಸಂಸ್ಥೆ–ದಕ್ಷಿಣ (ಸಮೇತಿ) ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವತಿಯಿಂದ 2020–21ನೇ ಸಾಲಿನಲ್ಲಿ, ವಿವಿಧ ನೋಡಲ್ ತರಬೇತಿ ಸಂಸ್ಥೆಗಳಲ್ಲಿ 40 ಜನ ವಿತರಕರಂತೆ 25 ತಂಡಗಳಲ್ಲಿ 1000 ಜನ ಪರಿಕರ ವಿತರಕರಿಗೆ, ವಿಸ್ತರಣಾ ಸೇವೆಗಳ ಡಿಪ್ಲೋಮಾ ಪದವಿಯನ್ನು ಆಯೋಜಿಸಿ ತರಬೇತಿಗೊಳಿಸಲಾಯಿತು.

### ಬೇಕರಿ ತರಬೇತಿ ಘಟಕ

ಈ ಘಟಕವು 56 ವಿದ್ಯಾರ್ಥಿಗಳಿಗೆ, 2 ತಂಡಗಳಲ್ಲಿ 14 ವಾರಗಳ ಬೇಕರಿ ತಂತ್ರಜ್ಞಾನ ವಿಷಯದಲ್ಲಿ ಮತ್ತು 36 ಜನರಿಗೆ 3 ತಂಡಗಳಲ್ಲಿ 4 ವಾರಗಳ ವಾಣಿಜ್ಯ ಬೇಕರಿ ತಂತ್ರಜ್ಞಾನ ವಿಷಯದಲ್ಲಿ ಸರ್ಟಿಫಿಕೇಟ್ ಕೋರ್ಸ್‌ನ್ನು ಆಯೋಜಿಸಿದೆ. ಐದು ಅಲ್ಪಾವಧಿಯ ಕೋರ್ಸ್‌ಗಳನ್ನು ಆಯೋಜಿಸಿದ್ದು 96 ಅಭ್ಯರ್ಥಿಗಳು ಭಾಗವಹಿಸಿದ್ದರು ಮತ್ತು 190 ಸದಸ್ಯರಿಗಾಗಿ ಪ್ರಾಯೋಜಿತ /ವಿವಿಧ ಇಲಾಖೆ ಮತ್ತು ಇತರೆ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಆರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಕೌಶಲ್ಯ ಅಭಿವೃದ್ಧಿ ಕೇಂದ್ರದ ಪ್ರಯೋಜನೆಯೊಂದಿಗೆ 16 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ 470 ಸದಸ್ಯರಿಗೆ ತರಬೇತಿಯನ್ನು ನೀಡಲಾಗಿದೆ.

### ಕೃಷಿ ಮಾಹಿತಿ ಘಟಕ

ಘಟಕವು, 02 ಪತ್ರಿಕಾ ಗೋಷ್ಠಿ, 56 ಪತ್ರಿಕಾ ಪ್ರಕಟಣೆ, 16 ಪತ್ರಿಕಾ ಭೇಟಿ, 383 ಪತ್ರಿಕಾ ವರದಿ ಮತ್ತು 11 ಜನಪ್ರಿಯ/ ಯಶೋಗಾಥೆಗಳ ಪ್ರಕಟಣೆಯನ್ನು ಆಯೋಜಿಸಿತ್ತು. ಅಲ್ಲದೆ 195 ದೂರದರ್ಶನ/ಆಕಾಶವಾಣಿ ಕಾರ್ಯಕ್ರಮಗಳು, 03 ಕೃಷಿ ಪ್ರದರ್ಶನಗಳು/ಕೃಷಿ ಮೇಳಗಳಲ್ಲಿ ಭಾಗವಹಿಸಿತ್ತು. 55 ವಿಶೇಷ ಲೇಖನ, 5 ತಾಂತ್ರಿಕ ಮಡಿಕೆ ಪತ್ರಿಕೆಗಳ ಪ್ರಕಟಣೆಯ ಆಯೋಜನೆಯನ್ನು ಸಹ ನಿರ್ವಹಿಸಲಾಗಿದೆ.

### ದೂರ ಶಿಕ್ಷಣ ಘಟಕ

ಒಟ್ಟು 392 ಅಭ್ಯರ್ಥಿಗಳು; ಕೃಷಿಯಲ್ಲಿ ಒಂದು ವರ್ಷದ ಡಿಪ್ಲೊಮಾ (263), ಸಾವಯವ ಕೃಷಿ (20), ಸ್ನಾತಕೋತ್ತರ ಕೃಷಿ ಡಿಪ್ಲೊಮಾ (09) ಹಾಗೂ ಜೇನು ಸಾಕಣೆ(12)ಗಳಲ್ಲಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪೂರೈಸಿದ್ದಾರೆ.

### ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ

ಪ್ರಸ್ತುತ ಕೇಂದ್ರವು, 2185 ದೂರವಾಣಿ ಕರೆಗಳು, 26289 ಕಛೇರಿ ಭೇಟಿಗಳು, 18 ಕ್ಷೇತ್ರ ಭೇಟಿ, 2281 ಸಮಾಲೋಚನೆಗಳು, 2514 ವಾಟ್ಸ್‌ಆಪ್ ಪ್ರಶ್ನೆಗಳಿಗೆ ಉತ್ತರ ಹೀಗೆ ಒಟ್ಟು 33287 ಸಲಹಾ ಸೇವೆಗಳನ್ನು ಪೂರೈಸಿದೆ ಹಾಗೂ 04 ವೀಡಿಯೊ ಕಾನ್ಫರೆನ್ಸಿಂಗ್ ಸಭೆಗಳನ್ನು ಆಯೋಜಿಸಲಾಗಿದೆ. ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರವು ಬೀಜ, ಪ್ರಕಟಣೆ, ಬಿತ್ತನೆ ಸಾಮಗ್ರಿ,

# EXTENSION

The extension activities carried out by different units of the Directorate of Extension are furnished below ;

**Farmers Training Institute (FTI)**

Organized 21 skill-oriented Training Programmes and trained 532 participants.

**Staff Training Unit (STU)**

STU has organized 22 training programmes covering 994 staff members of developmental departments and UAS-B. SAMETI (South), UAS-B has organized Diploma in Agriculture and Extension Services for Input Dealers (DAESI) in different NTIs in 25 batches wherein 1000 Input Dealers comprising of 40 members in each batch have been trained during 2020-21

**Bakery Training Unit (BTU)**

BTU has organized two batches of 14-week certificate course in Bakery Technology for 56 students and three batches of four weeks course on Commercial Bakery to 36 participants. Conducted five short courses for 96 participants and six Collaborative/ Sponsored Training Programmes for 190 members. Sixteen training programmes were organized under SDC in which 470 members were benefited.

**Farm Information Unit (FIU)**

Organized two press conferences, 56 press releases, 16 press visits, 383 press coverages and published 11 popular / success stories. Participated in 195 TV / Radio programmes, three Agricultural Exhibition / Krishimelas and co-ordinated in publishing 55 special articles & five technical leaflets.

**Distance Education Unit (DEU)**

392 candidates completed Diploma and Certificate courses like One year Diploma in Agriculture (263), Organic Farming (20), Post Graduate Diploma in Agriculture (09) and Apiculture (12) through distance education.

**Agricultural Technology Information Centre (ATIC)**

The Centre provided 33287 advisory services through 2185 telephone calls while, 26289 farmers visited the centre. 18 field visits, 2281 consultations, 2514 what's app query answers were attended

ಮೌಲ್ಯವರ್ಧಿತ ಉತ್ಪನ್ನಗಳು, ಉಪಕರಣಗಳು ಹಾಗೂ ಜೈವಿಕ ಗೊಬ್ಬರ ಮತ್ತು ಸಿ.ಡಿ.ಗಳ ಮಾರಾಟದಿಂದ ಒಟ್ಟು 1,09,57,415/–ರೂಪಾಯಿಗಳ ವಹಿವಾಟನ್ನು ನಡೆಸಿದೆ. 'ಇ–ಕೃಷಿ ಯು.ಎ.ಎಸ್.–ಬಿ ಪೋರ್ಟಲ್'ನ್ನು ಒಟ್ಟು 31,54,817 ಜನ ವೀಕ್ಷಿಸಿರುತ್ತಾರೆ.

**ವಿಸ್ತರಣಾ ಶಿಕ್ಷಣ ಘಟಕಗಳು**

ನಾಗೇನಹಳ್ಳಿ, ಮೈಸೂರು ಮತ್ತು ಕೋಲಾರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳು 16 ಕ್ಷೇತ್ರ ಪ್ರಯೋಗಗಳು, 22 ಮುಂಚೂಣಿ ಪ್ರಾತ್ಯಕ್ಷಿಕೆಗಳು, 14 ಒಳಾವರಣ ಮತ್ತು 19 ಹೊರಾವರಣ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. 338 ಸಮೂಹ ಚರ್ಚೆಸಭೆ, 03 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ, 63 ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಿದೆ. ಮುಂದುವರೆದು, 508 ಕ್ಷೇತ್ರ ಭೇಟಿಗಳು, 15 ಕ್ಷೇತ್ರೋತ್ಸವ, 05 ರೇಡಿಯೋ & ಟಿ.ವಿ ಕಾರ್ಯಕ್ರಮಗಳು, 1775 ರೈತ ಸಲಹಾ ಸೇವೆಗಳನ್ನು ಸಹ ಪೂರೈಸಿದೆ.

**ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ**

ಅಭಿವೃದ್ಧಿ ಇಲಾಖೆಗಳ ಸಿಬ್ಬಂದಿಗೆ 18 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳನ್ನು ಆಯೋಜಿಸಿದ್ದಾರೆ. ಇದರ ಜೊತೆಗೆ 09 ವಿಶೇಷ ಅತಿಥಿ ಉಪನ್ಯಾಸಗಳು, 49 ಪದ್ಧತಿ ಪ್ರಾತ್ಯಕ್ಷಿಕೆಗಳನ್ನು, 22 ಗುಂಪು ಚರ್ಚೆ, 82 ಕ್ಷೇತ್ರ ಭೇಟಿ ಗಳನ್ನು ನಡೆಸಲಾಗಿದೆ.

**ಕೃಷಿ ವಿಜ್ಞಾನ ಕೇಂದ್ರಗಳು**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿಯ ಏಳು ಕೃಷಿ ವಿಜ್ಞಾನ ಕೇಂದ್ರಗಳಾದ; ಬೆಂಗಳೂರು ಗ್ರಾಮಾಂತರ (ಹಾಡೋನಹಳ್ಳಿ), ಚಿಕ್ಕಬಳ್ಳಾಪುರ (ಚಿಂತಾಮಣಿ), ರಾಮನಗರ (ಮಾಗಡಿ), ಮಂಡ್ಯ (ವಿ.ಸಿ.ಫಾರಂ), ಹಾಸನ (ಕಂದಲಿ), ತುಮಕೂರು (ಕೊನೆಹಳ್ಳಿ) ಹಾಗೂ ಚಾಮರಾಜನಗರ (ಹರದನಹಳ್ಳಿ) ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ಅವಧಿಯಲ್ಲಿ ಈ ಕೃಷಿ ವಿಜ್ಞಾನ ಕೇಂದ್ರಗಳು; 107 ರೈತರ ತಾಕುಗಳಲ್ಲಿ 27 ಕ್ಷೇತ್ರ ಪರೀಕ್ಷೆಗಳನ್ನು, ಮತ್ತು 112 ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು 1023 ಪ್ರಾತ್ಯಕ್ಷಿಕೆದಾರರ ತಾಕುಗಳಲ್ಲಿ ಕೈಗೊಳ್ಳಲಾಗಿದೆ. 18272 ರೈತ/ರೈತ ಮಹಿಳೆ/ಯುವರೈತರಿಗಾಗಿ 218 ಒಳ ಆವರಣ ಹಾಗೂ 308 ಹೊರ ಆವರಣ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದಲ್ಲದೆ, 1123 ಜನ ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಸಿಬ್ಬಂದಿಗೆ ಅವರ ಕೌಶಲ ಹಾಗೂ ಜ್ಞಾನವರ್ಧನೆಗಾಗಿ 32 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

**ಇತರ ಪ್ರಮುಖ ಚಟುವಟಿಕೆಗಳು**

1. **ಕೃಷಿಮೇಳ 2020:** ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 2020ರ ನವೆಂಬರ್ 11, 12 ಮತ್ತು 13 ರಂದು ಮೂರು ದಿನಗಳ ಕಾಲ ಸರಳವಾಗಿ ಭೌತಿಕ ಮತ್ತು ಡಿಜಿಟಲ್ ರೂಪದಲ್ಲಿ ಈ ವರ್ಷವು ಸಹ ಕೃಷಿ ಮೇಳವನ್ನು ಆಯೋಜಿಸಲಾಗಿತ್ತು. ಈ ಮೇಳದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ವಿವಿಧ ವಿಭಾಗಗಳಿಂದ ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರಘಟ್ಟದ ವತಿಯಿಂದ ಸಂಸ್ಥೆಗಳ ಉತ್ಪಾದನೆ ಮತ್ತು ತಂತ್ರಜ್ಞಾನಗಳ ಪ್ರದರ್ಶನಕ್ಕಾಗಿ 18 ಕೃಷಿ ವಸ್ತುಪ್ರದರ್ಶನ ಮಳಿಗೆಗಳ ವ್ಯವಸ್ಥೆ ಮಾಡಲಾಗಿತ್ತು. ವಿಶ್ವವಿದ್ಯಾನಿಲಯವು ಇತ್ತೀಚೆಗೆ ಬಿಡುಗಡೆ ಮಾಡಿದ ತಳಿಗಳ 28 ಬೆಳೆ ಪ್ರಾತ್ಯಕ್ಷಿಕೆಗಳ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸುಮಾರು 1.1 ಲಕ್ಷ ರೈತರು ಹಾಗೂ ಸಾರ್ವಜನಿಕರು ಭೌತಿಕ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಭಾಗವಹಿಸಿ ಈ ಮೇಳದ ಸದುಪಯೋಗ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಬರುವ ಜಿಲ್ಲಾ ಮಟ್ಟದ ಪ್ರಗತಿಪರ ರೈತ ಹಾಗೂ ರೈತಮಹಿಳೆ ಪ್ರಶಸ್ತಿ (17), ತಾಲ್ಲೂಕು ಮಟ್ಟದ ಯುವ ರೈತ ಹಾಗೂ ಯುವ ರೈತಮಹಿಳೆ ಪ್ರಶಸ್ತಿ (94) ಮತ್ತು ರಾಜ್ಯ ಮಟ್ಟದ ಪ್ರಶಸ್ತಿ(6) ಪುರಸ್ಕೃತರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಭೌತಿಕವಾಗಿ (498), ವಾಟ್ಸ್ ಆಪ್ (383) ಹಾಗೂ ಡಿಜಿಟಲ್ (50) ಮೂಲಕ ಭಾಗವಹಿಸಿದ ರೈತರಿಂದ ಸ್ವೀಕರಿಸಿದಂತ ಕೃಷಿ ಸಂಬಂಧಿತ ಪ್ರಶ್ನೆಗಳಿಗೆ ತಜ್ಞರ ತಂಡದಿಂದ ಸಲಹೆಗಳನ್ನು ಸಹ ನೀಡಲಾಯಿತು.

apart from organising four video conferences. ATIC has generated a revenue of Rs.1,09,57,415/- by selling seeds, publications, planting materials, value added products, implements, bio-fertilizers and CDs. As many as 31,54,817 have viewed the e- krishi UAS-B portal.

**Extension Education Units (EEUs)**

The units functioning at Naganahalli, Mysore and Kolar conducted 16 farm trials and 22 Front line demonstrations and organized 14 on-campus and 19 off-campus training programmes. Nearly 338 group discussion meetings, three bimonthly technical workshops, 63 method demonstrations, 508 field visits, 15 field days, five radio and TV programmes, 1775 farm advisory services were provided.

**National Agricultural Extension Project (NAEP)**

Conducted 18 Bi-monthly Technical Workshops to the staff of the line departments. Organized nine special guest lectures, 49 method demonstrations on the technologies relevant to the districts, 22 group discussion, 82 field visits and advisory services.

**Krishi Vignan Kendras (KVKs)**

Seven Krishi Vignan Kendras *viz.,* Bangalore Rural (Hadonahalli), Chickballapura (Chintamani), Ramanagara (Magadi), Mandya (V.C.Farm), Hassan (Kandali), Tumakuru (Konehalli) and Chamarajanagara (Haradanahalli) are functioning under the administrative control of UAS-B. These KVKs put together conducted 27 On-Farm Testing of technologies by benefiting 107 farmers and 112 Front Line Demonstrations covering 1023 farmers to popularize various proven technologies. KVKs have conducted 218 on-campus and 308 off-campus training programmes for the benefit of 18272 farmers and 32 training programmes for 1123 extension personnel of line departments.

**Other Important Activities**

1. **Krishimela 2020 :** The University has organized both physical and virtual Krishimela to disseminate agricultural technologies to the farmers from November 11$^{th}$ to 13$^{th}$, 2020 at Gandhi Krishi Vignan Kendra, Bengaluru. During the mela 28 crop varieties that were recently released by the University were demonstrated. Around 1.1 lakhs farmers and general public participated in the mela both online and offline. During the Krishimela, District level progressive Farmers/ Farm women awards (17), Taluk level Best Youth Farmer/Farmwomen awards (94) and State level Best Farmers (6) were felicitated. In the mela, suitable solutions were also suggested to the farmers on their queries by physical (498), whats app (383) and online (50) consultancy services.

2. **ಯು.ಎ.ಎಸ್.(ಬಿ.) ಅಗ್ರಿವಾರ್ ಘಟಕದ ಸ್ಥಾಪನೆ:** ಪ್ರಸ್ತುತ ಘಟಕವನ್ನು ಕೋವಿಡ್–19 ಸಂಕಷ್ಟದ ಪರಿಸ್ಥಿತಿಯಲ್ಲಿ ಕೃಷಿ 22 ವಿವಿಧ ವಿಭಾಗಗಳ ವಿಜ್ಞಾನಿಗಳನ್ನೊಳಗೊಂಡಂತೆ ತಂತ್ರಜ್ಞಾನ ಮಾಹಿತಿ ಕೇಂದ್ರದಲ್ಲಿ ಸ್ಥಾಪಿಸಲಾಯಿತು. ಘಟಕವು ವೈಜ್ಞಾನಿಕ ಸಲಹೆಗಳನ್ನು ನೀಡುವುದಲ್ಲದೆ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ರೈತರ ಮತ್ತು ಗ್ರಾಹಕರ ನಡುವೆ ಸಂಪರ್ಕ ಸೇತುವಾಗಿ ಕೆಲಸ ನಿರ್ವಹಿಸಿತು. ಘಟವು ನೇರ ಮಾರಾಟದ ವ್ಯವಸ್ಥೆ ಮೂಲಕ 310 ಟನ್ ತಾಜಾ ಹಣ್ಣು, 350 ಟನ್ ಮಾವು ಮತ್ತು 116 ಟನ್ ತರಕಾರಿ ಹಾಗು ಹೂವುಗಳನ್ನು ಮಾರಾಟ ಮಾಡಲು ವ್ಯವಸ್ಥೆಯನ್ನು ಕಲ್ಪಿಸಿತ್ತು.

3. **ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಕಿರು ವೀಡಿಯೋ, ಯೂಟೂಬ್ ಚಾನಲ್ ಮತ್ತು ಫೇಸ್ಬುಕ್:** ಕೃಷಿ ಮಾಹಿತಿ ಘಟಕದ ವತಿಯಿಂದ ಕನ್ನಡದಲ್ಲಿ ವಿಡಿಯೋಗಳನ್ನು ಅಭಿವೃದ್ಧಿಪಡಿಸಿ ಕೃಷಿ ವಿಶ್ವವಿದ್ಯಾನಿಲಯದ ಅಧಿಕೃತ ಯೂಟೂಬ್ ಚಾನಲ್ ಮತ್ತು ಫೇಸ್ಬುಕ್‌ಗಳಲ್ಲಿ ಅಪ್‌ಲೋಡ್ ಮಾಡಲಾಯಿತು. 2,82,994 ಕೃಷಿಕರಿಗೆ ಮತ್ತು ಕೃಷಿಕರ ಗುಂಪುಗಳಿಗೆ ವಾಟ್ಸಪ್ ಮೂಲಕ ಕೃಷಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳು ಹೊತ್ತಿಗೆಯ ವಿದ್ಯುನ್ಮಾನ ಪ್ರತಿಯನ್ನು ವಿತರಿಸಲಾಗಿದೆ.

4. **ತಾಂತ್ರಿಕತೆಗಳ ವಾಣೀಜ್ಯೀಕರಣ:** ತೆಂಗಿನ ಕಾಯಿ ಹಿಟ್ಟಿನ ಬಿಸ್ಕತ್ತು ಮತ್ತು ಲಾಡೂ ತಾಂತ್ರಿಕತೆಗಳು ವಾಣೀಜ್ಯೀಕರಣಗೊಂಡಿವೆ.

5. **ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಒಂದು ಜಿಲ್ಲೆ ಒಂದು ಉತ್ಪನ್ನ** [One District One Product (ODOP)] ಯೋಜನೆಯಡಿಯಲ್ಲಿ ವಿಶ್ವವಿದ್ಯಾನಿಲಯವು ಸರ್ಕಾರವು ನೀಡಿದ ಸುಮಾರು 9.86 ಕೋಟಿ ಅನುದಾನದಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ, ಐದು Common Incubation Centres ಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ (ಚಾಮರಾಜನಗರ – ಅರಿಶಿಣ, ರಾಮನಗರ & ಹಾಸನ – ತೆಂಗು, ಚಿಕ್ಕಬಳ್ಳಾಪುರ – ಟೊಮ್ಯಾಟೊ, ವಿ.ಸಿ. ಫಾರಂ ಮಂಡ್ಯ –ಬೆಲ್ಲ)

**ವಿಶ್ವವಿದ್ಯಾನಿಲಯ ಗಳಿಸಿದ ಪ್ರಶಸ್ತಿಗಳು ಮತ್ತು ಮಾನ್ಯತೆಗಳು**

- ಭಾ.ಅ.ಕೃ.ಪ ಪ್ರಯೋಜಿತ ಅಖಿಲ ಭಾರತ ಸುಸಂಘಟಿತ ಪ್ರಯೋಜನೆಯ ಅತ್ಯುತ್ತಮ ಕೇಂದ್ರಕ್ಕೆ ನೀಡುವ ಚೌಧರಿ ದೇವಿಲಾಲ್ ಪ್ರಶಸ್ತಿಗೆ ಕೃಷಿ ವಿಶ್ವವಿದ್ಯಾಲಯದ ಅಖಿಲ ಭಾರತ ಸುಸಂಘಟಿತ ಪ್ರಯೋಜನೆ– ಒಣ ಕೃಷಿ ಬೇಸಾಯ ಕೇಂದ್ರವು ಪುರಸ್ಕರಿಸಲ್ಪಟ್ಟಿದೆ. ಸದರಿ ಕೇಂದ್ರವು ಒಟ್ಟಾರೆ 31 ಕೇಂದ್ರಗಳ ಪೈಕಿ ಪ್ರಥಮ ಸ್ಥಾನ ಪಡೆದಿರುತ್ತದೆ, ಈ ಸಂಧರ್ಭದಲ್ಲಿ ರೂ. ಒಂದು ಲಕ್ಷ ಬಹುಮಾನ ಲಭಿಸಿದೆ.

- ಪಠ್ಯಕ್ರಮ, ಪಠ್ಯಕ್ರಮ ವಿನ್ಯಾಸ ಮತ್ತು ಸಾವಯವ ಕೃಷಿ ತರಬೇತಿ ಕಾರ್ಯಕ್ರಮಗಳ ಕುರಿತಾಗಿ ನವದೆಹಲಿಯ Agriculture Today - Agri-Education Awards–2021 ಸದರಿ ಪುರಸ್ಕಾರಕ್ಕೆ ಕೃಷಿ ವಿಶ್ವವಿದ್ಯಾನಿಲಯವು ಭಾಜನವಾಗಿರುತ್ತದೆ.

**ಸಿಬ್ಬಂದಿಗಳ ಸಾಧನೆ**

**ಬೋಧಕರು/ವಿಜ್ಞಾನಿಗಳಿಗೆ ಸಂದ ಪ್ರಶಸ್ತಿ – ಪುರಸ್ಕಾರಗಳು**

- ಡಾ. ಎನ್. ನಟರಾಜ್ ಕರಬ, ಪ್ರಾಧ್ಯಾಪಕರು, ಬೆಳೆ ಶರೀರಶಾಸ್ತ್ರ ವಿಭಾಗ ಇವರು ಭಾರತೀಯ ರಾಷ್ಟ್ರೀಯ ವಿಜ್ಞಾನ ಆಕೆಡಮಿ, ನವದೆಹಲಿ ಇವರು ನೀಡುವ "INSA Best Teacher Award, 2020" ಗೆ ಭಾಜನರಾಗಿರುತ್ತರೆ.

- ಡಾ. ಎಂ.ಎಸ್.ಶೇಷಶಾಯಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬೆಳೆ ಶರೀರಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಇವರಿಗೆ ನವದೆಹಲಿಯ ಇಂಡಿಯನ್ ಸೊಸೈಟಿ ಫಾರ್ ಪ್ಲಾಂಟ್ ಫಿಸಿಯಾಲಜಿವತಿಯಿಂದ ಪ್ರೊ. ಜಿ.ವಿ.ಜೋಶಿ ಸ್ಮಾರಕ ಉಪನ್ಯಾಸ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

2. **Establishment of UAS-B Agri. War Unit:** The unit was established at ATIC during COVID -19 pandemic situation with a team of 22 scientists from different disciplines. The unit provided technical advisory services and acted as a linkage between farmers and the consumers for marketing of farmer's produces. The unit facilitated the marketing of 310 tonnes of fresh fruits, 350 tonnes of mangoes and 116 tonnes of vegetables & flowers.

3. **Launching of UAS-B tagged short videos, youtube channel and facebook:** UAS-B tagged short videos, YouTube Channel and Facebook on various activities of the University. Uploaded/ shared the soft copy of Improved Package of Practices in Agriculture to 2,82,994 Farmers and Farmers groups through WhatsApp.

4. **Commercialization of Technologies:** Coconut Flour Based Cookies and ladoo technologies were commercialized.

5. **ODOP:** University is implementing the projects pertinent to the doubling of farmer's income through ODOP (One District One Product). Five common incubation centres are being developed in the crops/products *viz.,* Turmeric (Chamarajanagara), Coconut (Ramanagara and Hassan), Tomato (Chikkaballapura) and Jaggery (Mandya) with a total outlay of Rs. 9.86 crores

**Awards and Recognitions Achieved by the University**

- ICAR - Chaudhary Devi Lal Outstanding All India Coordinated Research Project Award was bestowed to AICRP for Dryland Agriculture, UAS, GKVK centre as Best Coordinating Centre among 31 centres across the country with a cash prize of Rs. One lakh, on 93$^{rd}$ ICAR Foundation Day on 16$^{th}$ July 2021
- Excellence in Course & Curriculum Design Award (Agri-Education Awards 2021) and Organic Farming Training Programme Award (Eco Agriculture Awards 2021) were awarded to UAS-B by the Agriculture Today Group, New Delhi

**Faculty Achievements**

**Awards / Distinction conferred on Teachers /Scientists**

- Dr. N. Nataraja Karaba, Professor, Department of Crop Physiology received the 'INSA Best Teacher Award, 2020' awarded by Indian National Science Academy (INSA), New Delhi
- Dr. M. S. Sheshshayee, Prof. & Head, Dept of Crop Physiology, CoA, GKVK was conferred with the Prof. GV. Joshi Memorial Lecture award by the Indian Society for Plant Physiology, New Delhi

- ಡಾ. ದ್ರೋಣಾಚಾರಿ ಮಾನ್ವಿ, ಸಹಾಯಕ ಪ್ರಾಧ್ಯಾಪಕರು, ಇವರು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು – ರಾಷ್ಟ್ರೀಯ ಉನ್ನತ ಶಿಕ್ಷಣ ಯೋಜನೆ ಮತ್ತು ಕೃಷಿ ಇಂಜಿನಿಯರಿಂಗ್ ವಿಭಾಗ ಇವರು ಆಯೋಜಿಸಿದ್ದ "ಫಾರ್ಮ್ ಯಾಂತ್ರೀಕರಣದಲ್ಲಿ ನಾವೀನ್ಯತೆಯನ್ನು ಉತ್ತೇಜಿಸುವುದರ" ಕುರಿತ ಕೃತಜ್ಞಾ– ಒಂದು ರಾಷ್ಟ್ರಮಟ್ಟದ ಕೃಷಿ ತಂತ್ರಜ್ಞಾನ ಹ್ಯಾಕಥಾನ್ ಉನ್ನತ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿ ದಕ್ಷಿಣ ವಲಯ ಮಟ್ಟದ ತಾಂತ್ರಿಕ ಮೌಲ್ಯಮಾಪನ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿರುತ್ತಾರೆ.

- ಡಾ. ಕೆ.ಎಂ. ಹರಿಣಿಕುಮಾರ್, ಪ್ರಾಧ್ಯಾಪಕರು, ಸಸ್ಯ ಜೈವಿಕ ತಂತ್ರಜ್ಞಾನ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿ.ಕೆ.ವಿ.ಕೆ. ಇವರಿಗೆ "ಕನ್ನಡ ಸೇವಾ ರತ್ನ ಪ್ರಶಸ್ತಿ"ಯನ್ನು ದಿನಾಂಕ 20.03.2021ರಿಂದ 21.03.2021ರವರೆಗೆ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ, ಬೆಂಗಳೂರು ನಗರ ಜಿಲ್ಲೆ ಕಾರ್ಯಕ್ರಮದಲ್ಲಿ ನೀಡಲಾಯಿತು.

- ಡಾ. ಹೆಚ್.ಎಸ್. ಮಮತ ಇವರಿಗೆ ವಿಸ್ತರಣೆಯ ಕ್ಷೇತ್ರದಲ್ಲಿ ನೀಡಿದ ಅಪಾರ ಕೊಡುಗೆಗಾಗಿ ವರ್ಷದ "ಜುವಾರಿ ಅತ್ಯುತ್ತಮ ವಿಸ್ತರಣಾ ಪ್ರಶಸ್ತಿ"ಯನ್ನು ಕೃಷಿ ವಿಶ್ವವಿದ್ಯಾಲಯದ ಪ್ರತಿಷ್ಠಾಪನ ದಿನದಂದು ನೀಡಿ ಗೌರವಿಸಲಾಯಿತು.

- ಡಾ. ಕೆ.ಆರ್. ಶ್ರೀನಿವಾಸ್, ವಿಜ್ಞಾನಿ, (ಸಸ್ಯ ಸಂರಕ್ಷಣೆ), ಕೃಷಿ ವಿಜ್ಞಾನ ಕೇಂದ್ರ, ಕೊನೆಹಳ್ಳಿ, ತಿಪಟೂರು ಇವರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿ ಸಂಘದ ವತಿಯಿಂದ ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ ಲಭಿಸಿದೆ.

- ಡಾ. ಶಿವರಾಮು. ಕೆ, ಪ್ರಾಧ್ಯಾಪಕರು ಹಾಗೂ ಹಿರಿಯ ವಾರ್ತಾತಜ್ಞರು, ಕೃಷಿ ಮಾಹಿತಿ ಘಟಕ, ಜಿ.ಕೆ.ವಿ.ಕೆ., ಬೆಂಗಳೂರು ಇವರಿಗೆ ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಯನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು 2020ರ ನವೆಂಬರ್ 11ರಿಂದ 13ರವರೆಗೆ ಜಿಕೆವಿಕೆಯಲ್ಲಿ ನಡೆದ ಕೃಷಿ ಮೇಳ –2020ರಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ನಾಮನಿರ್ದೇಶನಗಳು**

- ಡಾ. ಆರ್. ಕೃಷ್ಣಮೂರ್ತಿ, ಪ್ರಾಧ್ಯಾಪಕರು, ಅರಣ್ಯ ಮತ್ತು ಪರಿಸರ ವಿಜ್ಞಾನ ವಿಭಾಗ, ಜಿ.ಕೆ.ವಿ.ಕೆ., ಬೆಂಗಳೂರು ಇವರು ಕರ್ನಾಟಕ ಸರ್ಕಾರ ಅಧ್ಯಕ್ಷತೆಯಲ್ಲಿ ಮರ ತಜ್ಞರ ಸಮಿತಿಗೆ ಸದಸ್ಯರನ್ನಾಗಿ ನೇಮಿಸಲಾಗಿದೆ.

- ಡಾ. ಎಸ್. ರಮೇಶ್, ಪ್ರಾಧ್ಯಾಪಕರು, ಅನುವಂಶೀಯತೆ ಮತ್ತು ಸಸ್ಯತಳಿ ಅಭಿವೃದ್ಧಿಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ಇವರನ್ನು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಇಂಡಿಯನ್ ಜರ್ನಲ್ ಆಫ್ ಜೆನೆಟಿಕ್ಸ್ ಅಂಡ್ ಪ್ಲಾಂಟ್ ಬ್ರೀಡಿಂಗ್ ಪತ್ರಿಕೆಯ ಸಂಪಾದಕೀಯ ಮಂಡಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದಾರೆ.

- ಡಾ. ಎಂ.ಎಸ್. ಶೇಷಶಾಯಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬೆಳೆ ಶರೀರ ಕ್ರಿಯಾಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಇವರು ಭಾರತ ಸರ್ಕಾರದ ಸಮಗ್ರ ಜೈವಿಕ ವಿಜ್ಞಾನಗಳು, SERB, DST ಇವರ ತಾಂತ್ರಿಕ ತಜ್ಞರ ಸಮಿತಿಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದಾರೆ.

- ಡಾ. ಕೆ. ಸಿ. ನಾರಾಯಣಸ್ವಾಮಿ, ಪರೀಕ್ಷಾ ನಿಯಂತ್ರಣಾಧಿಕಾರಿಗಳು ಇವರು ಎ.ಪಿ.ಎಸ್.ಎಸ್.ಆರ್.ಡಿ.ಐ. ಹಿಂದೂಪುರ ಸಂಸ್ಥೆಯ ಆಂತರಿಕ ಜೈವಿಕ ಸುರಕ್ಷತಾ ಸಮಿತಿಯ ಪರಿಣಿತ ಸದಸ್ಯರಾಗಿ 3 ವರ್ಷಗಳ ಕಾಲ ನಾಮನಿರ್ದೇಶನಗೊಂಡಿದ್ದಾರೆ.

- ಡಾ. ಎಂ.ಎಲ್. ರೇವಣ್ಣ, ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ಇವರು ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಸಲಹಾ ಮಂಡಳಿಯ ಸದಸ್ಯರಾಗಿ ದಿನಾಂಕ 02.07.2019ರಿಂದ 2 ವರ್ಷಗಳವರೆಗೆ ನೇಮಕಗೊಂಡಿರುತ್ತಾರೆ.

- Dr. Dronachari Manvi, Assistant Professor of Agricultural Engineering received first place in KRIAGYA- A National level Agtech Hackathon on “Promoting Innovation in Farm Mechanization” organized by ICAR- NAHEP

- Dr. K. M. Harini Kumar, Professor of Plant Biotechnology, was honoured with “Kannada Seva Rathna Award” by Kannada Saahithya Parishat, Bengaluru Urban District

- Dr. H. S. Mamatha, Asst. Prof. of Food and Nutrition, was awarded the ‘Zuari Best Extension Worker Award’ during the Foundation Day of UAS-B

- Dr. K. R. Shreenivasa, Scientist (Plant Protection), KVK, Konehalli, Tiptur received Dr. R. Dwarkinath Best Extension Worker Award from Alumini Association of UAS-B

- Dr. Shivaramu.K, Professor and Senior Information Specialist, Farm Information Unit, GKVK, Bangalore is honoured with Dr. R. Dwarakinath Best Extension Worker Award during Krishimela -2020 of UAS-B

**Nominations**

- Dr. R. Krishna Murthy, Professor, Department of Forestry and Environmental Science is nominated as member of Tree Expert Committee by the Government of Karnataka

- Dr. S. Ramesh, Professor of GPB, CoA, GKVK is nominated as the Editorial Committee member of Indian Journal of Genetics and Plant Breeding, IARI, New Delhi

- Dr. M. S. Sheshshayee, Professor and Head, Dept. of Crop Physiology, CoA, GKVK is nominated as member of Technical Expert Committee, Integrated Biological Sciences, SERB, DST, Govt of India

- Dr. K.C. Narayanaswamy, Controller of Examinations is nominated as an Expert Member of Institutional Bio-Safety Committee (IBSC) of APSSRDI, Hindupur for a period of 3 years

- Dr. M. L. Revanna, Professor, Department of Food Science and Nutrition, College of Agriculture, GKVK is conferred as Member for Karnataka State Minimum Wages Advisory Board, Labour Department

- ಡಾ. ಎನ್.ಬಿ. ಪ್ರಕಾಶ್, ಪ್ರಾಧ್ಯಾಪಕರು, ಮಣ್ಣು ವಿಜ್ಞಾನ ಮತ್ತು ಕೃಷಿ ರಾಸಾಯನಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಇವರು ಮಲೇಷಿಯನ್ ಜನರ್ಲ್ ಆಫ್ ಸಾಯಿಲ್ ಸೈನ್ಸ್‌ನ ಅಂತರರಾಷ್ಟ್ರೀಯ ಸಮಿತಿ ಸದಸ್ಯರಾಗಿ 1 ಫೆಬ್ರವರಿ 2020 ರಿಂದ 1 ಫೆಬ್ರವರಿ 2023ರ ಅವಧಿಗೆ ನೇಮಕಗೊಂಡಿರುತ್ತಾರೆ.
- ಡಾ. ಮಂಜುನಾಥ್ ಗೌಡ, ಪ್ರಾಧ್ಯಾಪಕರು, ರೇಷ್ಮೆಕೃಷಿ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಇವರು ಬೆಂಗಳೂರಿನ ಕರ್ನಾಟಕ ರಾಜ್ಯ ರೇಷ್ಮೆಕೃಷಿ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ ಇಲ್ಲಿ ಸಂಶೋಧನಾ ಪರಾಮರ್ಶನ ಸಮಿತಿ ಸದಸ್ಯರಾಗಿ ನೇಮಕಗೊಂಡಿದ್ದಾರೆ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಕೇಂದ್ರ ರೇಷ್ಮೇ ಜರ್ಮ್‌ಪ್ಲಾಸ್ಂ ಸಂಪನ್ಮೂಲ ಕೇಂದ್ರ, ಹೊಸೂರು, ತಮಿಳುನಾಡು ಇಲ್ಲಿ ಸಂಶೋಧನಾ ಸಲಹಾ ಸಮಿತಿಗೆ ಸೆಪ್ಟೆಂಬರ್ 2020ರಿಂದ ನೇಮಕಗೊಂಡಿದ್ದಾರೆ.
- ಡಾ. ಎಂ.ಕೆ. ಪ್ರಸನ್ನಕುಮಾರ್, ಸಹ ಪ್ರಾಧ್ಯಾಪಕರು, ಸಸ್ಯ ರೋಗಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ಇವರು ಅಮೇರಿಕಾದ ಸಸ್ಯರೋಗಶಾಸ್ತ್ರ ಸಂಘದ ಸದಸ್ಯರಾಗಿ ನಾಮ ನಿರ್ದೇಶನಗೊಂಡಿದ್ದಾರೆ.
- ಡಾ. ಕೆ.ಬಿ. ಉಮೇಶ್, ಪ್ರಾಧ್ಯಾಪಕರು ಮತ್ತು ವಿಶ್ವವಿದ್ಯಾನಿಲಯದ ಮುಖ್ಯಸ್ಥರು ಮತ್ತು ಡಾ. ಜಿ.ಎಂ. ಗಡ್ಡಿ, ಸಹ ಪ್ರಾಧ್ಯಾಪಕರು, ಇವರುಗಳು ಕರ್ನಾಟಕ ಸರ್ಕಾರದ ಸಕ್ಕರೆ ಮತ್ತು ಕಬ್ಬು ನಿಯಂತ್ರಣ ಸಮಿತಿ ಸದಸ್ಯರಾಗಿ ನಾಮ ನಿರ್ದೇಶನಗೊಂಡಿದ್ದಾರೆ.

**ಸಮ್ಮೇಳನಗಳು/ ಅಲ್ಪಾವಧಿಯ ಕೋರ್ಸ್‌ಗಳು/ ಶೈಕ್ಷಣಿಕ ಪ್ರವಾಸಗಳಲ್ಲಿ ಭಾಗವಹಿಸುವಿಕೆ**

**ಅಂತರರಾಷ್ಟ್ರೀಯ**

20 ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಅಂತರಾಷ್ಟ್ರೀಯ ಸಮ್ಮೇಳನ/ ಅಲ್ಪಾವಧಿ ಕೋರ್ಸ್‌ಗಳಲ್ಲಿ ಅಂತರ್ಜಾಲದ ಮುಖಾಂತರ ಭಾಗವಹಿಸಿದ್ದರು

**ಆಯೋಜಿಸಿದ ತರಬೇತಿ ಕಾರ್ಯಕ್ರಮಗಳು/ ಸಮ್ಮೇಳನಗಳು/ ಕಾರ್ಯಾಗಾರಗಳು**

**ತರಬೇತಿ ಕಾರ್ಯಕ್ರಮಗಳು**

ವಿಶ್ವವಿದ್ಯಾನಿಲಯವು 35 ಕೌಶಲ್ಯಾಭಿವೃದ್ಧಿ ತರಬೇತಿಗಳು, 9 ವೆಬಿನಾರ್‌ಗಳು, 2 ಸೆಮಿನಾರ್‌ಗಳು, 1 ರಾಷ್ಟ್ರೀಯ ಸಮ್ಮೇಳನ, 2 ಅಂತರಾಷ್ಟ್ರೀಯ ಸಮ್ಮೇಳನ, 3 ರಿಫ್ರೆಶರ್ ಕೋರ್ಸ್, 1 ಬ್ರೈನ್‌ಸ್ಟಾರ್ಮ್ ಅಧಿವೇಶನ, 1 ಅಂತರಾಷ್ಟ್ರೀಯ ಬೇಸಿಗೆ ಶಿಭಿರ ಮತ್ತು 7 ಕಾರ್ಯಗಾರಗಳನ್ನು ಬೆಳೆ ಉತ್ಪಾಧನೆ, ಬೆಳೆ ಸುಧಾರಣೆ, ಸಸ್ಯ ಸಂರಕ್ಷಣೆ, ಕೋಯ್ಲೋತ್ತರ ಸಂಸ್ಕರಣೆ, ಆಹಾರ ಮತ್ತು ಮೌಲ್ಯವರ್ಧನೆ, ಕೃಷಿ ಯಂತ್ರೋಪಕರಣ, ಸಾಮಾಜಿಕ ವಿಜ್ಞಾನ ಮತ್ತು ವ್ಯಕ್ತಿತ್ವ ಅಭಿವೃದ್ಧಿ ಕ್ಷೇತ್ರಗಳಲ್ಲಿ ಆಯೋಜಿಸಲಾಗಿದೆ.

**ಸಮಾವೇಶಗಳು ಮತ್ತು ಮತ್ತು ವಿಚಾರ ಸಂಕಿರಣಗಳು**

- ವಿಶ್ವವಿದ್ಯಾನಿಲಯವು ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ "ಜೀವನ ಶೈಲಿ ರೋಗ ನಿರ್ವಹಣೆಗೆ ಆಹಾರ ಮತ್ತು ಪೋಷಣೆ" ಕುರಿತು ರಾಷ್ಟ್ರೀಯ ವೆಬಿನಾರ್ ಅನ್ನು ದಿನಾಂಕ: 25ರಿಂದ 27 ಆಗಸ್ಟ್ 2020ರವರೆಗೆ ಹಮ್ಮಿಕೊಂಡಿತ್ತು.
- ವಿಶ್ವವಿದ್ಯಾನಿಲಯವು ವರ್ಚುವಲ್ ಸಮ್ಮರ್ ಸ್ಕೂಲ್ (ಐವಿಎಸ್‌ಎಸ್) 2020 ಪ್ರಾರಂಭಿಕ ಕಾರ್ಯಕ್ರಮವನ್ನು ದಿ.20–05–2020ರಂದು ಆನ್‌ಲೈನ್ ಮೂಲಕ ಆಯೋಜಿಸಲಾಯಿತು.
- ವಿಶ್ವವಿದ್ಯಾನಿಲಯವು ದಿನಾಂಕ 03–06–2020ರಂದು 2020ರ ನೂತನ ಕೃಷಿ ಕಾಯ್ದೆಗಳು–2020 ಇದರ ಬಗ್ಗೆ ಬುದ್ಧಿಮತ್ತೆ ಅಧಿವೇಶನವನ್ನು ಆಯೋಜಿಸಲಾಯಿತು.

- Dr. N.B. Prakash, Professor, Department of Soil Science and Agril. Chemistry, CoA, GKVK is nominated as International Panel member of Malaysian Journal of Soil Science
- Dr. Manjunath Gowda, Professor, Department of Sericulture, College of Agriculture, GKVK is serving as a member of Research Review Committee of Karnataka State Sericulture Research and Development Institute, Thalaghattapura, Bengaluru and also as the member of Research Advisory Committee of Central Sericultural Germplasm Resources Centre, Central Silk Board, Hosur, Tamil Nadu
- Dr. M.K. Prasannakumar, Associate Professor, Department of Plant Pathology, College of Agriculture, GKVK is nominated as American Phytopathological Society member
- Dr. K.B. Umesh, Professor and Dr. G.M. Gaddi, Assoicate Professor, Department of Agricultural Economics, College of Agriculture, GKVK have been nominated as a Member, Sugar and Sugarcane control committee, Government of Karnataka

**Participation in Conferences/ Short Courses/ Exposure Visits**

**International**

As many as twenty University faculty participated in International Conferences and short courses through online

**Training Programmes/Conferences/ Workshops organized**

**Training Programs**

University has organized 35 skill development oriented training programmes, nine webinars, two seminars, one conference, two international conference, three referesher course, one brain storm sessions, two orientation programmes, one international summer school and seven workshops in the area of Crop Produciton, Crop Improvement, Plant Protection, Post Harvest Processing, Food and Value Addition, Farm Mechanization, Social Sciences and Personality Development

**Conferences, Seminars and Symposia**

- University has organized National Webinar on 'Diet and Nutrition for Life Style Disease Management during Covid-19 pandemic' from 25-27$^{th}$ August 2020
- International virtual summer school (IVSS) 2020 Kick-off Programme was organized by University through Online on 20-05-2020
- Brainstorming session on APMC Act amendments in Karnataka - 2020 was organized by the University on 03.06.2020

- ವಿಶ್ವವಿದ್ಯಾನಿಲಯವು 'ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾವಿನ ಮಾರಾಟದ ಅವಕಾಶಗಳು ಮತ್ತು ಸವಾಲುಗಳು' ಕುರಿತು ವಿಚಾರ ಸಂಕಿರಣವನ್ನು ದಿನಾಂಕ 08–06–2020ರಂದು ಆನ್‌ಲೈನ್ ಮೂಲಕ ಆಯೋಜಿಸಲಾಯಿತು.
- 'ಬಿದಿರು, ಸಿಕಾಡಗಳು ಮತ್ತು ಮಿಡತೆಗಳು–ಅವು ಒಂದಾಗಿರಲು ಕಾರಣಗಳೇನು?' ವಿಷಯದ ಕುರಿತ ವೆಬಿನಾರನ್ನು ದಿನಾಂಕ 09.06.2020ರಂದು ವಿಶ್ವವಿದ್ಯಾನಿಲಯವು ಹಮ್ಮಿಕೊಳ್ಳಲಾಗಿತ್ತು.
- ವಿಶ್ವವಿದ್ಯಾನಿಲಯವು ದಿನಾಂಕ 12.06.2020 ರಂದು "ಎಂಡೋಫೈಟ್‌ಗಳು ಮತ್ತು ಅಂಡ್ ಸಸ್ಯಗಳಲ್ಲಿ ಹವಾಮಾನ ಸಹಿಷ್ಣುತೆ' ಎಂಬ ಅಂತರರಾಷ್ಟ್ರೀಯ ವೆಬಿನಾರ್ ಅನ್ನು ಬೆಳೆ ಶರೀರ ಕ್ರಿಯಾಶಾಸ್ತ್ರ ವಿಭಾಗದಲ್ಲಿ ಐ.ಸಿ.ಎ.ಆರ್. – CAAST ಯೋಜನೆಯಡಿಯಲ್ಲಿ ಆಯೋಜಿಸಲಾಗಿತ್ತು.
- ಕೀಟಶಾಸ್ತ್ರ ಮತ್ತು ಸಸ್ಯ ರೋಗಶಾಸ್ತ್ರ ವಿಭಾಗಗಳ ಸಂಯುಕ್ತಾಶ್ರಯದಲ್ಲಿ ಡಾ. ಲೆಸ್ಲಿ ಸಿ. ಕೋಲ್ಮನ್ ಸ್ಮರಣಾರ್ಥ ಉಪನ್ಯಾಸವನ್ನು ದಿನಾಂಕ 16–6–2020ರಂದು ಆಯೋಜಿಸಲಾಗಿತ್ತು.
- ಕಾರ್ಡ್ಸ್ ವತಿಯಿಂದ "ರೈತ ಉತ್ಪಾದಕ ಸಂಸ್ಥೆಗಳು: ಸಣ್ಣ ಮತ್ತು ಅತಿ ಸಣ್ಣ ರೈತರ ಕಲ್ಯಾಣಕ್ಕಾಗಿ ಪರಿಣಾಮಕಾರಿ ಸಾಂಸ್ಥಿಕ ಮಾದರಿ" ಎಂಬ ವೆಬಿನಾರ್ ಅನ್ನು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 9ರಿಂದ 10 ಜುಲೈ 2021ರವರೆಗೆ ಆಯೋಜಿಸಲಾಗಿತ್ತು.
- ಅಖಿಲ ಭಾರತ ಸುಸಂಘಟಿತ ಜೇನುನೊಣಗಳ ಹಾಗೂ ಪರಾಗಸ್ಪರ್ಶಿಗಳ ಪ್ರಾಯೋಜನೆ ಮತ್ತು ಜೇನುಕೃಷಿ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 28.07.2020ರಂದು "ಭಾರತದಲ್ಲಿ ಜೇನುಸಾಕಣೆಯ ಭವಿಷ್ಯ' ಎಂಬ ರಾಷ್ಟ್ರ ಮಟ್ಟದ ಜೇನುಕೃಷಿ ವೆಬಿನಾರನ್ನು ಆಯೋಜಿಸಲಾಗಿತ್ತು.
- ಕೃಷಿ ಮಾರುಕಟ್ಟೆ, ಸಹಕಾರ ಮತ್ತು ವ್ಯವಹಾರ ನಿರ್ವಹಣೆ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ಇವರು 28ನೇ ವಾರ್ಷಿಕ AERA ಸಮ್ಮೇಳನ 2020 ಭಾರತೀಯ ಕೃಷಿ ಭವಿಷ್ಯ: ಸವಾಲುಗಳು ಮತ್ತು ಅವಕಾಶಗಳು" ಕುರಿತು ಸಮಾವೇಶವನ್ನು ದಿನಾಂಕ: 16ರಿಂದ 18 ಡಿಸಂಬರ್, 2020ರವರೆಗೆ ಕೃಷಿ ಮಾರಾಟ, ಸಹಕಾರ ಮತ್ತು ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಆಯೋಜಿಸಲಾಗಿತ್ತು
- "ಭಾರತದಲ್ಲಿನ ಕುಲಾಂತರಿ ಬೆಳೆಗಳಿಗೆ ಪ್ರಸ್ತುತ ಸನ್ನಿವೇಶ ಮತ್ತು ಮುಂದಿನ ಹಾದಿ" ಕುರಿತು ವರ್ಚುವಲ್ ಅಂತರರಾಷ್ಟ್ರೀಯ ಸಮ್ಮೇಳನವನ್ನು ಭಾರತೀಯ ಬೀಜೋದ್ಯಮ ಒಕ್ಕೂಟ ಇವರ ಸಹಯೋಗದೊಂದಿಗೆ ಸಸ್ಯ ಜೈವಿಕ ತಂತ್ರಜ್ಞಾನ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ಇವರು ದಿನಾಂಕ 28.01.2021ರಂದು ಆಯೋಜಿಸಿದ್ದರು.
- ವಿಶ್ವವಿದ್ಯಾನಿಲಯ ಗ್ರಂಥಾಲಯವು 25 ಮತ್ತು 26, ಫೆಬ್ರವರಿ 2021ರಂದು "ಜಾಲಬಂಧಿತ ವಿದ್ಯುನ್ಮಾನ ಪರಿಸರದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರಗಳ ನಿರ್ವಹಣೆ: ಪ್ರವೃತ್ತಿಗಳು, ಸವಾಲುಗಳು ಮತ್ತು ಅವಕಾಶಗಳು" ಕುರಿತು "ಕೃಷಿ ಗ್ರಂಥಪಾಲಕರು ಮತ್ತು ಬಳಕೆದಾರರ ಸಮುದಾಯದ (ಐಸಿಎಲ್‌ಯುಸಿ–2021) ಸಹಭಾಗಿತ್ವದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನವನ್ನು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾಗಿತ್ತು. ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ

**ಇತರ ಪ್ರಮುಖ ಚಟುವಟಿಕೆಗಳು**

- ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆಯ ಆವರಣದಲ್ಲಿ ದಿನಾಂಕ 03.09.2020 ರಂದು ಸದ್ಭಾವನಾ ದಿನ 2020ರ ಅಂಗವಾಗಿ ಫಿಟ್ ಇಂಡಿಯಾ ಓಟವನ್ನು ರಾಜ್ಯ ಎನ್.ಎಸ್.ಎಸ್. ಕೋಶದವರ ಸಹಯೋಗದೊಂದಿಗೆ ಆಯೋಜಿಸಲಾಯಿತು.
- ವಿಶ್ವವಿದ್ಯಾನಿಲಯವು, ವಿಶ್ವ ಮಣ್ಣು ದಿನಾಚರಣೆ –2020, "ಕೃಷಿ ಶಿಕ್ಷಣ ದಿನ–2020", "ರೈತರ ದಿನಾಚರಣೆ–2020" ಮತ್ತು 6ನೇ ಅಂತರಾಷ್ಟ್ರೀಯ ಯೋಗ ದಿನವನ್ನು ಆಯೋಜಿಸಲಾಯಿತು

- Seminar on "National and International mango marketing: opportunities and challenges" was organized by the University on 08.06.2020
- Webinar on 'Bamboos, Cicadas and Locusts - What binds them together?' was organised by the University on 09.06.2020 under the NAHEP-CAAST programme
- International Webinar (Conference) on "Endophytes and Climate Resilience in Plants" was organized by the University on 12.06.2020 under the NAHEP-CAAST programme
- Coleman Lecture 2020 was organized by the University on 16$^{th}$ June 2020
- Webinar on 'Farmers Producer Organizations: An effective institutional model for welfare of small and marginal farmers' was organized by University during 9-10 July 2020
- National Webinar on 'Future Prospects of Apiculture in India' was organised by the University on 28.07.2020
- University has organized '28$^{th}$ Annual AERA Conference 2020 on Future of Indian Agriculture: Challenges and opportunities' from 16$^{th}$ to 18$^{th}$ December, 2020
- Virtual International conference on 'Current Scenario & Path Forward for GM crops in India' was organized in collaboration with Federation of Seed Industry of India on 28$^{th}$ Jan. 2021
- University has organized and hosted an 'International Conference of Agricultural Librarians and Users Community (ICALUC-2021)' on 'Management of Knowledge Resource Centers in the networked digital environment: Trends, challenges and opportunities' on 25$^{th}$ and 26$^{th}$ February 2021

**Other Important Activities**

- College of Agriculture, GKVK organized "Fit India Run" conducted as part of Sadbhavana Day 2020 at GKVK Campus in co-ordination with State NSS Cell
- University has celebrated World Soil Day, Agricultural Education Day, Farmers' Day and 6$^{th}$ International Day of Yoga

## ಹಣಕಾಸು

ಕರ್ನಾಟಕ ಸರ್ಕಾರವು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ 2020–21ನೇ ಸಾಲಿಗೆ ರೂ.11050.87 ಲಕ್ಷಗಳನ್ನು ಸಹಾಯಾನುದಾನ–ವೇತನಕ್ಕಾಗಿ, ರೂ.12597.15 ಲಕ್ಷಗಳನ್ನು ಸಹಾಯಾನುದಾನ– ನಿವೃತ್ತಿ ವೇತನಕ್ಕಾಗಿ, ರೂ.840.00 ಲಕ್ಷಗಳನ್ನು ಸಹಾಯಾನುದಾನ–ಗುತ್ತಿಗೆ/ಹೊರಗುತ್ತಿಗೆಗಾಗಿ, ರೂ.363.00 ಲಕ್ಷಗಳನ್ನು ದಿನಗೂಲಿ ನೌಕರರ ವೇತನಕ್ಕಾಗಿ, ರೂ.87.75 ಲಕ್ಷಗಳನ್ನು ಸಂಶೋಧನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗಾಗಿ, ರೂ.35.50 ಲಕ್ಷಗಳನ್ನು ಸಂಶೋಧನೆ ಅಡಿಯಲ್ಲಿ ಗಿರಿಜನ ಉಪಯೋಜನೆಗಾಗಿ ಹಾಗೂ ರೂ.912.00 ಲಕ್ಷಗಳನ್ನು ಸಹಾಯಾನುದಾನ– ಸಾಮಾನ್ಯ ಸಂಶೋಧನೆಗಾಗಿ ಮತ್ತು ರೂ.454.00 ಲಕ್ಷಗಳನ್ನು ಸಹಾಯಾನುದಾನ– ಕೃಷಿ ಶಿಕ್ಷಣ ಅಡಿಯಲ್ಲಿ, ರೂ.500.00 ಲಕ್ಷಗಳನ್ನು ಸಹಾಯಾನುದಾನ– ಆಸ್ತಿ ಸೃಜನೆಗಾಗಿ, ಪರಿಶಿಷ್ಟ ಜಾತಿ ಉಪಯೋಜನೆಯಡಿ ರೂ.116.25 ಲಕ್ಷಗಳನ್ನು, ಗಿರಿಜನ ಉಪಯೋಜನೆಯಡಿ ರೂ.45.50 ಲಕ್ಷಗಳನ್ನು ಒಟ್ಟು ರೂ.27002.01 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಿದೆ.

ಭಾರತ ಸರ್ಕಾರದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಂಶೋಧನಾ ಕಾರ್ಯಕ್ರಮಗಳಿಗೆ ಒಟ್ಟು ರೂ. 49.2 ಕೋಟಿಗಳನ್ನು 244 ಪ್ರಾಯೋಜನೆಗಳಿಗೆ 2020–21ನೇ ಸಾಲಿಗೆ ಬಿಡುಗಡೆ ಮಾಡಿದೆ. ಇದರಲ್ಲಿ 32 ಅಖಿಲ ಭಾರತ ಸಂಯೋಜಿತ ಸಂಶೋಧನಾ ಪ್ರಾಯೋಜನಗಳು, 08 ಕೃಷಿ ವಿಜ್ಞಾನ ಕೇಂದ್ರ ಪ್ರಾಯೋಜನೆಗಳು, 69 ತಾತ್ಪೂರ್ತಿಕ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಪ್ರಾಯೋಜನೆಗಳು, 19 ಐ.ಸಿ.ಎ.ಆರ್. ಕೃಷಿ ವಿಶ್ವವಿದ್ಯಾಲಯಗಳ ಸಬಲೀಕರಣ ಯೋಜನೆಗಳು, 01 ವಿಶ್ವಬ್ಯಾಂಕ್ ಪ್ರಯೋಜಿತ ಯೋಜನೆ ಹಾಗೂ ಭಾರತ ಸರ್ಕಾರದ ವಿವಿಧ ಇಲಾಖೆಗಳಾದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್, ಕೃಷಿ ಮತ್ತು ಸಹಕಾರ ಮುಂತಾದ ಇಲಾಖೆಗಳ 115 ಪ್ರಾಯೋಜನೆಗಳು ಒಳಗೊಂಡಿವೆ. ಕರ್ನಾಟಕ ಸರ್ಕಾರವು ರೂ.7.92 ಕೋಟಿಗಳನ್ನು 85 ಪ್ರಾಯೋಜನೆಗಳಿಗೆ ಸಂಶೋಧನಾ ಕಾರ್ಯಕ್ರಮಗಳಿಗಾಗಿ ಅನುದಾನವನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಕರ್ನಾಟಕ ಸರ್ಕಾರದ 67 ತಾತ್ಪೂರ್ತಿಕ ಪ್ರಾಯೋಜನೆಗಳು ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 18 ಪ್ರಾಯೋಜನೆಗಳು ಒಳಗೊಂಡಿವೆ ಹಾಗೂ ಇತರ ಏಜೆನ್ಸಿಯ 58 ಪ್ರಾಯೋಜನೆಗಳಿಗೆ ಒಟ್ಟು 2.85 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**ಸಹಿ ಮಾಡಿದ ಒಪ್ಪಂದದ ದಸ್ತಾವೇಜುಗಳು**

ವಿಶ್ವವಿದ್ಯಾನಿಲಯವು ತಂತ್ರಜ್ಞಾನ ವರ್ಗಾವಣೆ, ಸಂಶೋಧನಾ ಚಟುವಟಿಕೆ ಮತ್ತು ಇತರೆ ಅಭಿವೃದ್ಧಿಪರ ಚಟುವಟಿಕೆಗಳಲ್ಲಿ ವಿಶ್ವವಿದ್ಯಾನಿಲಯವನ್ನು ಸದೃಢಗೊಳಿಸಲು ಪ್ರಸ್ತುತ ಸಾಲಿನಲ್ಲಿ ವಿವಿಧ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸರ್ಕಾರಿ, ಖಾಸಗಿ ಮತ್ತು NGO ಸಂಸ್ಥೆಗಳೊಂದಿಗೆ ಒಟ್ಟು 33 ಒಡಂಬಡಿಕೆಗಳನ್ನು ಮಾಡಿಕೊಂಡಿದೆ.

**ಗ್ರಂಥಾಲಯ**

- ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಗ್ರಂಥಾಲಯಗಳು, ಕೃಷಿ ವಿಜ್ಞಾನ ಮತ್ತು ತತ್ಸಮಾನ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳು, ನಿಯತಕಾಲಿಕೆಗಳು, ವರದಿಗಳು ಮತ್ತು ಪ್ರಬಂಧಗಳ ಮುದ್ರಿತ ಮತ್ತು ವಿದ್ಯುನ್ಮಾನ ರೂಪದ ಸಂಪನ್ಮೂಲಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ್ದು, ಈ ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಹಾಗೂ ಗ್ರಂಥಾಲಯ ಬಳಕೆದಾರರಿಗೆ ಅಂತರ್ಜಾಲ ತಾಣದ ಮೂಲಕ ಪರಾಮರ್ಶಿಸಲು ಅನುವು ಮಾಡಿಕೊಡಲಾಗಿದೆ.
- ಗ್ರಂಥಾಲಯದ ಬಳಕೆದಾರರ ಅನುಕೂಲಕ್ಕಾಗಿ ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ಮೈಲಾಫ್ಟ್, ಡಿಸ್ಪೇಸ್ ಮತ್ತು ಐ.ಆರ್.ಐ.ಎನ್.ಎಸ್.ಗಳಂತಹ ಇತ್ತೀಚಿನ ತಂತ್ರಜ್ಞಾನಗಳನ್ನು ಅಳವಡಿಸಿ ಅವುಗಳ ಬಳಕೆಗೆ ಅನುವು ಮಾಡಿಕೊಡಲಾಗಿದೆ.

# FINANCE

During 2020-21, The Govt. of Karnataka has released grant-in-aid towards; salary- Rs.11050.87 lakhs, pension - Rs. 12597.15 lakhs, Outsource - Rs.840 lakhs, Daily Wages -Rs.363.00 lakhs. Under Research Head towards Schedule Caste Sub Plan - Rs.87.75 lakhs and Tribal Sub Plan - Rs.35.50 lakhs, General-Research - Rs.912.00 lakhs, General-Education - Rs.454.00 lakhs, Asset Creation - Rs.500.00 lakhs. Under Education Head towards Schedule Caste Sub Plan - Rs.116.25 lakhs and Tribal Sub Plan - Rs.45.50 lakhs. Totally Rs.**27002.01** lakhs has been released.

Government of India has released a sum of Rs. 49.2 crores for the year 2020-21 for 244 Projects/ Schemes, of which AICRP-32 Projects, KVK-08 Projects, ICAR Adhoc -69 Projects, ICAR Strengthening projects- 19, GoI (DBT, DST, MNRE&SERB) -115 Projects and ICAR Funded World Bank -1 Project. GoK released a sum of Rs.7.92 crores for 85 Projects, of which GoK- 67 Projects and RKVY-18 Projects. Rs.2.85 crores was released for 58 Other Agency Projects.

**MoUs**

In order to facilitate Transfer of Technology, Collaborative Research and Developmental activities, University has signed 33 MoUs/ MoAs (International-2 Nos., National–10 Nos. & State-21 Nos.) with various institutions / organizations.

**Library**

- All the UAS-B Libraries hold a rich collection of literature in the field of Agriculture and Allied Sciences which comprises of books, periodicals, bound volumes, reports *etc.,* apart from print resources, e-resources are also being made available through online

- Latest Technology of softwares like Sententia, MyLoft, Dspace and IRINS are installed for the benefit of library users

- ಗ್ರಂಥಾಲಯವು ಗ್ರಂಥಾಲಯ ಸಿಬ್ಬಂದಿ ಕೈಪಿಡಿಯನ್ನು ಅಭಿವೃದ್ಧಿಪಡಿಸಿದೆ, ಗ್ರಂಥಾಲಯದ ಬಳಕೆದಾರರಿಗಾಗಿ ಕೈಪಿಡಿಯನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಗ್ರಂಥಾಲಯದ ಸೇವೆಗಳನ್ನು 24/7 ಲಭ್ಯವಿರುವಂತೆ ತನ್ನ ವೆಬ್‌ತಾಣವಾದ www.uasbagrilibindia.org ಮುಖಾಂತರ ಓದುಗರನ್ನು ತಲುಪುತ್ತಿದೆ.

**ನಿರ್ಮಿಸಿದ ಮೂಲಭೂತ ಸೌಕರ್ಯಗಳು**

- ಕೃಷಿ ಮಹಾವಿದ್ಯಾಲಯ, ಹಾಸನ ಮತ್ತು ವಿ. ಸಿ. ಫಾರಂ. ಮಂಡ್ಯ ಇಲ್ಲಿ ಬಾಲಕಿಯರ ಹಾಸ್ಟೆಲ್ ನಿರ್ಮಾಣ ಪ್ರಗತಿಯಲ್ಲಿದೆ ಹಾಗೂ ಕೃಷಿ ಮಹಾವಿದ್ಯಾಲಯ, ವಿ. ಸಿ. ಫಾರಂ. ಮಂಡ್ಯ ಇಲ್ಲಿ ಬಾಲಕರ ಹಾಸ್ಟೆಲ್ ನಿರ್ಮಾಣ ಪ್ರಗತಿಯಲ್ಲಿದೆ.
- ಜಿಕೆವಿಕೆ ಆವರಣದಲ್ಲಿ ಬೆಳೆ ಸಂಪನ್ಮೂಲಗಳ ಸಂರಕ್ಷಣೆಗಾಗಿ ಮಧ್ಯಮ ಅವಧಿಯ ಜೀನ್ ಬ್ಯಾಂಕ್ ನಿರ್ಮಾಣ ಪ್ರಗತಿಯಲ್ಲಿದೆ.
- ಆರ್‌ಕೆವಿವೈ ಅಡಿಯಲ್ಲಿ ಜಿಕೆವಿಕೆ ಜೆ ಬ್ಲಾಕ್‌ನಲ್ಲಿ ಉತ್ತಮವಾಗಿ ಸಂಪರ್ಕ ಹೊಂದಿದ ಕೃಷಿ ಹೊಂಡ ಅನ್ನು ರಚಿಸಲಾಗಿದೆ.
- ಕೃಷಿ ಮಹಾವಿದ್ಯಾಲಯ, ಚಾಮರಾಜನಗರದಲ್ಲಿ ಅಸ್ತಿತ್ವದಲ್ಲಿರುವ ಆಡಳಿತ ಕಟ್ಟದ ಮತ್ತು ರೈತರ ಹಾಸ್ಟೆಲ್ ಮೇಲೆ ಮೊದಲ ಮಹಡಿಯ ನಿರ್ಮಾಣ ಪ್ರಗತಿಯಲ್ಲಿದೆ.
- ಕೌಶಲ್ಯ ಅಭಿವೃದ್ಧಿ ಕೇದ್ರದ ನಿರ್ಮಾಣ, ಸೂಕ್ಷ್ಮ ನೀರಾವರಿ ಘಟಕಗಳ ಗುಣಮಟ್ಟ ಪರೀಕ್ಷೆಗಾಗಿ ಪ್ರಯೋಗಾಲಯದ ನಿರ್ಮಾಣ, ನಿಖರವಾದ ಅಭಿವೃದ್ಧಿ ಕೇಂದ್ರದ ನಿರ್ಮಾಣ ಮತ್ತು ಬೆಳೆ ಸಂಪನ್ಮೂಲಗಳಿಗೆ ಜೀನ್ ಬ್ಯಾಂಕ್ ನಿರ್ಮಾಣಗಳು ಪ್ರಗತಿಯಲ್ಲಿದೆ
- ಕೃವಿವಿ, ಎಚ್.ಎ.ಎಲ್– ಸಂಸ್ಥೆ ಸಾಮಾಜಿಕ ಜವ್ಬಾದಾರಿ (ಸಿಎಸ್‌ಆರ್) ಆಧರಿತ ಮುಖೇನ ಜೈವಿಕ ಇಂಧನದ ಖಾತರಿಗಳು ಪ್ರಗತಿಯಲ್ಲಿದೆ

## ಗುರಿ 2030

ಶೈಕ್ಷಣಿಕ, ಸಂಶೋಧನೆ ಮತ್ತು ಫಲಿತಗಳನ್ನು ತಲುಪಿಸುವ ವಿಧಾನಗಳಲ್ಲಿ ಕೃಷಿ ಕ್ಷೇತ್ರವು ಮಹತ್ತರ ಬದಲಾವಣೆಗಳನ್ನು ಬಯಸುತ್ತದೆ. ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರಬಲ್ಲ ಹೊಸರೂಪದ ಕೃಷಿ ವಿಜ್ಞಾನಿಗಳನ್ನು ಅಭಿವೃದ್ಧಿಪಡಿಸಲು ಆಧುನಿಕ ವಿಜ್ಞಾನಗಳನ್ನೊಳಗೊಂಡಂತೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಕೃಷಿ ಶಿಕ್ಷಣವನ್ನು ಆ ದಿಕ್ಕಿನೆಡೆಗೆ ಕೊಂಡೊಯ್ಯುವುದು ಭವಿಷ್ಯದ ಗುರಿಯಾಗಿದೆ. ಬೋಧನೆ–ಕಲಿಕೆ ಪ್ರಕ್ರಿಯೆಯನ್ನು ಆಧುನಿಕ, ನವೀನ, ಪ್ರಾಯೋಗಿಕ ಕೌಶಲ್ಯಾಧಾರಿತ ವಿಧಾನಗಳ ಮೂಲಕ ನಡೆಸಲಾಗುವುದು. ಪಠ್ಯಕ್ರಮವು ಜಾಗತಿಕವಾಗಿ ಹಾಗೂ ಸ್ಥಳೀಯವಾಗಿ ಸೂಕ್ತವಿರುವಂತೆ ಮಾಡಲಾಗುವುದು.

ವಿಶ್ವವಿದ್ಯಾನಿಲಯವು "ನಿರ್ದಿಷ್ಟವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನ ಕ್ಷೇತ್ರಗಳಲ್ಲಿ ಕಲಿಕೆ ಮತ್ತು ಸಂಶೋಧನೆ ಪ್ರಗತಿಯನ್ನು ಹೆಚ್ಚಿಸಲು ಶಾಸನಬದ್ಧ ಜವಾಬ್ದಾರಿ"ಯನ್ನು ಹೊಂದಿದೆ. ಕೃಷಿ ಹವಾಮಾನ ವಲಯಗಳಲ್ಲಿ ಒಳಗೊಳ್ಳುವಿಕೆಯ ಬೆಳವಣಿಗೆ ಸಾಧಿಸಲು ಸಂಶೋಧನೆ ಮತ್ತು ಅಭಿವೃದ್ಧಿಯ ಸಾಂಸ್ಥಿಕ ಚೌಕಟ್ಟಿನಲ್ಲಿ ಹಾಗೂ ಕಾರ್ಯವೈಖರಿಯಲ್ಲಿ ರಾಚನಿಕ ಬದಲಾವಣೆಗಳನ್ನು ತರಲು ಸಂಶೋಧನೆ ಮತ್ತು ಅಭಿವೃದ್ಧಿಯನ್ನು ತೀವ್ರಗೊಳಿಸುವ ಅವಶ್ಯಕತೆಯನ್ನು ವಿಶ್ವವಿದ್ಯಾನಿಲಯವು ಕಂಡುಕೊಂಡಿದೆ. ಈ ದೃಷ್ಟಿಯಲ್ಲಿ ವಿಶ್ವವಿದ್ಯಾನಿಲಯವು ಸಾರ್ವಜನಿಕ–ಖಾಸಗಿ ಭಾಗವಹಿಸುವಿಕೆ ಮಾದರಿಯ ಸಂಶೋಧನಾ ವಿಧಾನಕ್ಕೆ ಒತ್ತು ನೀಡಿ ಒಕ್ಕೂಟ ಸಂಶೋಧನಾ ವಿಧಾನವನ್ನು ಉತ್ತೇಜಿಸುತ್ತದೆ.

ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ತಲುಪದವರಿಗೆ ತಲುಪಿಸಿ ಅದರ ಲಾಭ ಸಾರ್ಥಕವಾಗುವಂತೆ ಮಾಡುವುದಕ್ಕೆ ವಿಶ್ವವಿದ್ಯಾನಿಲಯವು ಆದ್ಯತೆ ನೀಡುತ್ತದೆ. ಈ ದೃಷ್ಟಿಯಲ್ಲಿ ಸಮಗ್ರ ಸಮುದಾಯ ಅಭಿವೃದ್ಧಿಗೆ ಸಂಪನ್ಮೂಲ ಕೇಂದ್ರೀಕರಣ ನಿಗದಿಪಡಿಸಿದ ಗುರಿಯಾಗಿದೆ.

- The University Library has reached 24x7 all over the globe through its website www.uasbagrilibindia.org

**Infrastructures Created**

- Construction of medium term Gene Bank to house Crop Resources at GKVK campus is under progress
- Farm pond with a capacity of three crore litres is developed at J Block, GKVK under RKVY program
- Construction of Girls Hostel at Hassan and Mandya campuses, construction of Boys Hostel at Mandya cmpus are under progress
- Construction of first floor over the existing administrative building and farmers hostel at Chamarajanagar is completed
- Construction of Skill Development Centre, Laboratory for quality testing of micro- irrigation components by precision farming development centre and Gene Bank to house crop resources are under progress
- Quality assurance lab for bio-fuels (through UASB-HAL-CSR funded programme) is under progress

## VISION – 2030

The agriculture sector warrants for paradigm shift in academics, research and outreach approaches. Future thrust would be on streamlining agricultural education to impart quality education and to encompass frontier sciences to develop new band of agricultural scientists who are globally competitive. The teaching-learning process will be touched with modern innovative practical skill based methods. Curricula will be made globally competitive and locally relevant.

The University has statutory responsibility for furthering the advancement of learning and research, particularly in agriculture and other allied sciences. The University recognizes the need for intensification of research and develop road map to bring in structural change in the Research & Development of institutional frame work and functions in respect of Agro-climatic Zones with new mechanisms to achieve inclusive growth. In this endeavor, the university promotes consortia mode of research with emphasis on PPP mode.

Priority shall be to enhance the University to reach the unreached and harness the benefits of new technologies. In this regard Component Convergence for Comprehensive Community development shall be the set agenda.

## ಮುಂದಿನ ಹಾದಿ

ಸುಸ್ಥಿರ ಅಭಿವೃದ್ಧಿಯ ಗುರಿಯನ್ನು ನಿಗದಿಗೊಳಿಸಿರುವುದರಿಂದ ನಮ್ಮ ಕಾರ್ಯಕ್ರಮಗಳು ಆಹಾರ ಮತ್ತು ಪೌಷ್ಟಿಕತೆಯ ಭದ್ರತೆಯನ್ನು ಸಾಧಿಸುವ ಯೋಜನೆಗಳನ್ನು ಹಾಕಿಕೊಳ್ಳಬೇಕಿದೆ. ಅತ್ಯಾಧುನಿಕ ತಂತ್ರಜ್ಞಾನಗಳ, ಅಂತರಶಿಸ್ತೀಯ ವಿಧಾನಗಳ ಮತ್ತು ಮಾನವ ಸಂಪನ್ಮೂಲಗಳ ಮೇಲೆ ಲಭ್ಯವಿರುವ ಜ್ಞಾನದೊಂದಿಗೆ ಆಹಾರ ಭದ್ರತೆಯನ್ನು ಸಾಧಿಸುವತ್ತ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿದೆ. ನಮ್ಮ ಸಂಶೋದನೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ಕೇವಲ ಆಹಾರ ಭದ್ರತೆಯನ್ನಷ್ಟೆ ನೀಡದೆ ಪೌಷ್ಟಿಕಾಂಶಗಳ ಭದ್ರತೆಯನ್ನು ಸಹ ಒದಗಿಸಬೇಕಾಗಿದೆ. ಇದರ ಜೊತೆಗೆ ಉತ್ಪಾದನೆಯನ್ನು ಹೆಚ್ಚಿಸಲು ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವದಕ್ಕಾಗಿ ನಿರ್ವಹಣಾ ವ್ಯವಸ್ಥೆಯ ಅವಶ್ಯಕತೆಯೂ ಇದೆ. ಉತ್ಪಾದಕ, ಮಾರುಕಟ್ಟೆ ಮತ್ತು ಬಳಕೆದಾರರ ನಡುವಿನ ಜಾಲಬಂಧವನ್ನು ಅಭಿವೃದ್ಧಿಗೊಳಿಸುವುದು ಇನ್ನೂ ಒಂದು ಸವಾಲಾಗಿಯೇ ಇದೆ. ಈ ವ್ಯವಸ್ಥೆಯ ಸುಧಾರಣೆಯು ತಲುಪಲಾಗದವರಿಗೆ ಅನುಕೂಲವಾಗಲಿದೆ. ಗ್ರಾಮೀಣ ಸಮುದಾಯದ, ರಾಷ್ಟ್ರದ ಮತ್ತು ಜಗತ್ತಿನ ಒಳಿತಿಗಾಗಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದರೆಡೆಗೆ ಚಿಂತನಾಶೀಲರನ್ನಾಗಿಸುವ ನಿಟ್ಟಿನಲ್ಲಿ ನಮ್ಮ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ಮತ್ತು ಸಮರ್ಥಗೊಳಿಸುವ ಗುರುತರ ಜವಾಬ್ದಾರಿಯು ನಮ್ಮ ವಿಶ್ವವಿದ್ಯಾಲಯದ ಮೇಲಿದೆ. ನಿಖರವಾಗಿ ಹೇಳುವುದಾದರೆ ಕಲಿ, ದುಡಿ ಮತ್ತು ಹಿಂದಿರುಗಿಸು. ಮುಂಬರಿದ ತಂತ್ರಜ್ಞಾನಗಳನ್ನು ಆವಿಷ್ಕಾರ ಮಾಡಿ ವೈಜ್ಞಾನಿಕ ಬೋಧಕ ಸಿಬ್ಬಂದಿಯ ಜ್ಞಾನ ಅಡಿಪಾಯವನ್ನು ಸದೃಢಗೊಳಿಸಬೇಕಾಗಿದೆ. ಕೃಷಿ ಉತ್ಪಾದನಾ ವ್ಯವಸ್ಥೆಯಲ್ಲಿ ಮಾದರಿ ಬದಲಾವಣೆಯನ್ನು ತರಲು ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಉತ್ತಮ ಆಡಳಿತವನ್ನು ಕಲ್ಪಿಸುವುದಕ್ಕಾಗಿ ಸಶಕ್ತ ಹಣಕಾಸು ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ವಿಶ್ವವಿದ್ಯಾಲಯವು ಶ್ರಮಿಸುತ್ತಿದೆ. ನೂತನ ಶಿಕ್ಷಣ ನೀತಿ–2020 ಇದರ ಅನುಷ್ಠಾನವು ಕೂಡ ವಿಶ್ವವಿದ್ಯಾನಿಲಯಕ್ಕೆ ಸವಾಲಿನ ಪ್ರಕ್ರಿಯೆಯಾಗಿರುತ್ತದೆ.

**ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಭವಿಷ್ಯದ ಗುರಿ**

- ವಿದ್ಯಾರ್ಥಿಗಳಲ್ಲಿ ಕೌಶಲ್ಯತೆಯನ್ನು ಮತ್ತಷ್ಟು ಸದೃಢಗೊಳಿಸಲು ನೂತನ ಶಿಕ್ಷಣ ನೀತಿ–2020 ಅಳವಡಿಸಿಕೊಳ್ಳುವುದು
- ಸ್ನಾತಕೋತ್ತರ ಶೈಕ್ಷಣಿಕ ಚಟುವಟಿಕೆಗಳನ್ನು ಯಾಂತ್ರಿಕ ಸ್ವಯಂಚಾಲಿತಗೊಳಿಸುವುದು
- ತುರ್ತು ಸಂದರ್ಭಗಳಲ್ಲಿ ವರ್ಚ್ಯುಯಲ್/ಆನ್‌ಲೈನ್ ಶಿಕ್ಷಣವನ್ನು ಅನುಸರಿಸುವುದು
- ಸ್ನಾತಕ ಪಠ್ಯಕ್ರಮದಲ್ಲಿ ಎನ್.ಸಿ.ಸಿ. ಮರು ಪರಿಚಯಿಸುವುದು
- ಮಾಹಿತಿ, ಸಂವಹನೆ ಮತ್ತು ತಂತ್ರಜ್ಞಾನವನ್ನು ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಬೋಧನೆಗೆ ಅಳವಡಿಸಿಕೊಳ್ಳುವುದು, ವಿದೇಶಿ ವಿಶ್ವವಿದ್ಯಾಲಯ/ಸಂಸ್ಥೆಗಳೊಂದಿಗೆ ಸಹಯೋಜನೆ ಮಾಡಿಕೊಳ್ಳುವುದು
- ಬೋಧನೆಯ ಗುಣಾತ್ಮಕ ಸುಧಾರಣೆಗೆ ವಿದ್ಯಾರ್ಥಿಗಳಿಂದ ಇ–ಅಭಿಪ್ರಾಯ ಸಂಗ್ರಹಣೆ ವಿಧಾನ ಪ್ರಾರಂಭಿಸುವುದು
- ಕನ್ನಡದಲ್ಲಿ ರೈತಸ್ನೇಹಿ ಮೊಬೈಲ್ ಆಪ್‌ಗಳನ್ನು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸುವುದು
- ಸಣ್ಣ ಮತ್ತು ಅತಿಸಣ್ಣ ರೈತರಿಗಾಗಿ ಕೃಷಿ ಸಲಕರಣೆಗಳನ್ನು ವಿನ್ಯಾಸಗೊಳಿಸುವುದು ಮತ್ತು ಅದರ ಬಳಕೆ ಉತ್ತೇಜಿಸುವುದು
- ಪರಿಸರ ಸ್ನೇಹಿ ಕ್ರಮವಾಗಿ ಇ–ಆಡಳಿತ ಕ್ರಮ ಅನುಸರಿಸುವುದು
- ವೈವಿಧ್ಯಮಯ ಕ್ಷೇತ್ರಗಳಲ್ಲಿ ಮೌಲ್ಯವರ್ಧಿತ ಉತ್ಪನ್ನಗಳನ್ನು ಬ್ರಾಂಡ್ ಮಾಡಿ ಜನಪ್ರಿಯಗೊಳಿಸುವುದು
- ಕೃಷಿ ಪ್ರವಾಸೋದ್ಯಮ ಸ್ಥಾಪನೆ
- ಭಾರತೀಯ ಸಂಶೋಧನಾ ಮಾಹಿತಿ ಜಾಲದ ಸ್ಥಾಪನೆ (IRINS) ವೆಬ್ ಆಧಾರಿತ ಸಂಶೋಧನಾ ಮಾಹಿತಿ ನಿರ್ವಹಣೆ (RIM) ಸೇವೆಯು ಪ್ರಕ್ರಿಯೆಯಲ್ಲಿದೆ

## WAY FORWARD

The goal being set towards sustainable development, our programmes must be planned to achieve food and nutritional security. With the available knowledge, on cutting edge technologies, interdisciplinary approaches and human resources, it must be possible to enhance the production to accomplish food security. Research and developmental activities at UAS-B shall not only result in food security but provide nutritional security too. In addition, there must be systems to manage, to minimize the post-harvest losses to maximize the produce. Development of network between producer, markets and consumer is yet a challenging task. UAS-B has the responsibility of moulding and capacity building of our graduates to think critically for contributing to the rural society, as well as the nation, and even at global level, towards maximizing food production. In precise, Learn, Earn and Return. Advanced technologies should be brought out and promoted by building knowledge base among scientific faculty. University is striving to adopt dynamic finance system to provide better governance for accounting and monitoring for overall development to bring paradigm shift in agricultural production system. The University is looking forward to implement NEP-2020 suitably.

**Future Focus of UAS-B**

- Adoption of NEP-2020 for further strengthening of learning skill among students
- Automation of PG academic activities
- Virtual / Online education interventions to cope-up during emergencies
- Reintroduction of NCC in UG curriculum
- Application of ICT in teaching, research and extension; collaboration for teaching with foreign Universities / Institutions
- E-feedback mechanism from students towards quality improvement in teaching
- Development of farmers' friendly 'Mobile Apps' in Kannada
- Design and promotion of agricultural implements for small & marginal farmers
- E-governance / administration as a green initiative
- Branding and popularization of value-added products in diversified fields
- Establishment of Agri-Tourisum
- Establishment of Indian Research Information Network System (IRINS) web-based Research Information Management (RIM) service is under process

# 55ನೇ ಘಟಿಕೋತ್ಸವ

ಶೈಕ್ಷಣಿಕ ವರ್ಷ–2019–20ರಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಈ 55ನೇ ಘಟಿಕೋತ್ಸವದಲ್ಲಿಒಟ್ಟಾರೆ 1012 ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರಧಾನ ಮಾಡಲಾಗುತ್ತಿದೆ. ಅದರಲ್ಲಿ 659 ವಿದ್ಯಾರ್ಥಿಗಳು ವಿವಿಧ ಸ್ನಾತಕ ಪದವಿಗಳನ್ನು, 279 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಹಾಗೂ 74 ವಿದ್ಯಾರ್ಥಿಗಳು ಡಾಕ್ಟೊರಲ್ ಪದವಿಗಳನ್ನು ಪಡೆಯಲಿದ್ದಾರೆ.

ಇದೇ ಸಮಾರಂಭದಂದು ಡಾಕ್ಟರ್ ಆಫ್ ಫಿಲಾಸೊಫಿ ಪದವಿಯಲ್ಲಿ ಒಟ್ಟು 21 ಚಿನ್ನದ ಪದಕಗಳನ್ನು ಪ್ರಧಾನ ಮಾಡಲಿದ್ದು, ಅದರಲ್ಲಿ 05 ವಿದ್ಯಾರ್ಥಿನಿಯರು ಹಾಗೂ 07 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾನಿಲಯದ 12 ಚಿನ್ನದ ಪದಕಗಳನ್ನು, 08 ದಾನಿಗಳ ಚಿನ್ನದ ಪದಕಗಳು ಹಾಗೂ 01 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಂಚಿಕೊಂಡಿರುತ್ತಾರೆ.

ಮಾಸ್ಟರ್ ಪದವಿಯಲ್ಲಿ ಒಟ್ಟು 74 ಚಿನ್ನದ ಪದಕಗಳನ್ನು ಪ್ರಧಾನ ಮಾಡಲಿದ್ದು, ಅದರಲ್ಲಿ 17 ವಿದ್ಯಾರ್ಥಿನಿಯರು ಹಾಗೂ 16 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾನಿಲಯ ನೀಡುವ 22 ಚಿನ್ನದ ಪದಕಗಳು ಹಾಗೂ 05 ಆವರಣದ ಚಿನ್ನದ ಪದಕಗಳನ್ನು, 37 ದಾನಿಗಳ ಚಿನ್ನದ ಪದಕಗಳು ಹಾಗೂ 10 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಂಚಿಕೊಂಡಿರುತ್ತಾರೆ.

ಇದಲ್ಲದೆ, ಸ್ನಾತಕ ಪದವಿಯಲ್ಲಿ ಒಟ್ಟು 55 ಚಿನ್ನದ ಪದಕಗಳನ್ನು ಪ್ರಧಾನ ಮಾಡಲಿದ್ದು, ಅದರಲ್ಲಿ 11 ವಿದ್ಯಾರ್ಥಿನಿಯರು ಹಾಗೂ 05 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾನಿಲಯ ನೀಡುವ 06 ಕೃಷಿ ವಿಶ್ವವಿದ್ಯಾನಿಲಯ ನೀಡುವ ಚಿನ್ನದ ಪದಕಗಳು, 03 ಆವರಣದ ಚಿನ್ನದ ಪದಕಗಳು, 01 ಕೃವಿವಿಯ ಕ್ರೀಡಾ ಚಿನ್ನದ ಪದಕ, 37 ದಾನಿಗಳ ಚಿನ್ನದ ಪದಕಗಳು ಹಾಗೂ 08 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಂಚಿಕೊಂಡಿರುತ್ತಾರೆ.

55ನೇ ಘಟಿಕೋತ್ಸವ ಸಮಾರಂಭದಲ್ಲಿ ಒಟ್ಟಾರೆ 150 ಚಿನ್ನದ ಪದಕಗಳನ್ನು ಪಡೆಯಲಿದ್ದು, ಅದರಲ್ಲಿ 28 ಬಾಲಕರಿಗೆ 23 ವಿಶ್ವವಿದ್ಯಾನಿಲಯದ ಚಿನ್ನದ ಪದಕ, 27 ದಾನಿಗಳ ಚಿನ್ನದ ಪದಕ ಹಾಗೂ 07 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಅದರಂತೆ 33 ವಿದ್ಯಾರ್ಥಿನಿಯರಿಗೆ 26 ವಿಶ್ವವಿದ್ಯಾನಿಲಯದ ಚಿನ್ನದ ಪದಕ, 55 ದಾನಿಗಳ ಚಿನ್ನದ ಪದಕ ಹಾಗೂ 12 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಒಟ್ಟು 61 ವಿದ್ಯಾರ್ಥಿಗಳಿಗೆ 49 ವಿಶ್ವವಿದ್ಯಾನಿಲಯದ ಚಿನ್ನದ ಪದಕಗಳನ್ನು, 82 ದಾನಿಗಳ ಚಿನ್ನದ ಪದಕಗಳನ್ನು ಹಾಗೂ 19 ದಾನಿಗಳ ಚಿನ್ನದ ಪದಕಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು.

**ಈ ಪ್ರಮುಖ ಸಂದರ್ಭದಲ್ಲಿ, ಪದವಿ ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ನಾನು ಅಭಿನಂದಿಸುತ್ತೇನೆ ಹಾಗೂ ಭವಿಷ್ಯದ ಅವರ ಆಯ್ಕೆಯ ಕ್ಷೇತ್ರದಲ್ಲಿ ಅವರಿಗೆ ಒಳ್ಳೆಯದಾಗಲೆಂದು ಹಾರೈಸುತ್ತೇನೆ.**

**ಧನ್ಯವಾದಗಳು**

# 55th CONVOCATION

During this 55th Convocation (Academic year 2019-20) a total of 1012 students are being conferred with various degrees, of which 659 students receive Bachelor's Degrees, 279 students with Master's Degrees and 74 students receive Doctoral Degrees.

In Doctoral degree programmes, 07 boys and 05 girls have been awarded with 12 University Gold Medals, 08 Donor's Gold Medals and 01 Donor's Gold Medals Certificates. Totally, 21 Gold Medals are being awarded.

In Master's degree programmes, 16 boys and 17 girls are receiving 22 University Merit Gold Medals, 05 Campus Gold medals, 37 Donor's Gold Medals and 10 Donors Gold Medal Certificates. Totally, 74 Gold Medals are being awarded.

In Undergraduate degree programmes, 05 boys and 11 girls are receiving 06 University Merit Gold Medals, 03 Campus Gold medals, 01 UAS Sports Gold Medal, 37 Donor's Gold Medals and 08 Donors Gold Medal Certificates. Totally, 55 Gold Medals are being awarded.

During 55th Convocation in total, 150 Gold Medals and certificates are being awarded for 28 Boys with 23 UAS Gold Medals and 27 Donors Gold Medal and 07 Donors Gold Medal Certificates. 33 Girls are being awarded with 26 UAS Gold Medals and 55 Donors Gold Medal and 12 Donors Gold Medal Certificates.Totally, 61 students are awarded with 49 UAS Gold Medals and 82 Donors Gold Medal and 19 Donors Gold Medal Certificates.

*On this important occasion, I congratulate all the graduating students and wish them a great career ahead in their chosen fields*

***Thank You***



Director General, ICAR at polyhouse based protected cultivation established at GKVK, Bengaluru
ಐಸಿಎಆರ್‌ನ ಮಹಾ ನಿರ್ದೇಶಕರು, ಜಿಕೆವಿಕೆಯಲ್ಲಿ ಸ್ಥಾಪಿಸಲಾದ ಪಾಲಿಹೌಸ್ ಆಧಾರಿತ ಸಂರಕ್ಷಿತ ಕೃಷಿಯ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸುತ್ತಿರುವುದು




Dignitaries awarding certificate during Diploma (Agri.) Graduation Day
at College of Agriculture, Mandya
ಗಣ್ಯರು ಮಂಡ್ಯದ ಕೃಷಿ ಮಹಾವಿದ್ಯಾಲಯದಲ್ಲಿ ಕೃಷಿ ಡಿಪ್ಲೋಮಾದ ಪ್ರಮಾಣ ಪತ್ರ ಪ್ರದಾನ ಮಾಡುತ್ತಿರುವುದು

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

# UNIVERSITY OF AGRICULTURAL SCIENCES, BANGALORE

